ಅಧ್ಯಕ್ಷರು :— ಶಿವರಾಮೇಗೌಡರೇ, ಈಗ ತಾವು ಪ್ರಾರಂಭ ಮಾಡಿ. ಡಿ.ಆರ್. ಪಾಟೀಲರೇ, ಇದು ಬಹಳ ಮುಖ್ಯವಾದುದರಿಂದ, ಇದಾದ ನಂತರ ನಾನು ತಮ್ಮ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳುತ್ತೇನೆ. ಅದು ಮತ್ತು ಶೂನ್ಯವೇಳೆ ಎರಡನ್ನೂ ಕಂಪ್ಲೀಟ್ ಮಾಡುತ್ತೇನೆ.

(6) ರಾಜ್ಯಪಾಲರ ಭಾಷಣಕ್ಕೆ ಸಂಬಂಧಪಟ್ಟ ವಂದನಾರ್ಪಣಾ ಪ್ರಸ್ತಾವ.

+ ಶ್ರೀ ಎಲ್.ಆರ್. ಶಿವರಾಮೇಗೌಡ (ನಾಗಮಂಗಲ) :— ಸನ್ಮಾನ್ಯ ಸಭಾಧ್ಯಕ್ಷರೇ, ಸನ್ಮಾನ್ಯ ಗೌರವಾನ್ವಿತ ರಾಜ್ಯಪಾಲರು ಭಾಷಣ ಮಾಡಿದ್ದಕ್ಕೆ ನಾನು ಮೊನ್ನೆ ವಂದನಾ ನಿರ್ಣಯದ ಪ್ರಸ್ತಾವವನ್ನು ಸೂಚಿಸಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಕೆಲವರು, ಶಿವರಾಮೇಗೌಡರು ಬೇರೆ ಪಕ್ಷದವರು, ಅವರು ಮಾತನಾಡಲು ಅವಕಾಶವಿಲ್ಲ ಎನ್ನುವ ವಿಚಾರವನ್ನು ಈ ಸದನದಲ್ಲಿ ಪ್ರಸ್ತಾಪ ಮಾಡಿದರು. ಸನ್ಮಾನ್ಯ ಸಭಾಧ್ಯಕ್ಷರ ಮೂಲಕ ಈ ಸದನಕ್ಕೆ ಒಂದು ವಿಚಾರವನ್ನು ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ನಮ್ಮ ವಿಧಾನಸಭಾ ಕಾರ್ಯ ವಿಧಾನ ಮತ್ತು ನಡವಳಿಕೆ ನಿಯಮಗಳ ಪ್ರಕಾರ ನಿಯಮ 20ರ ಅಡಿಯಲ್ಲಿ "ಚರ್ಚೆಯ ವ್ಯಾಪ್ತಿ ಅಂಥ ಭಾಷಣದ ಪ್ರಸ್ತಾವಿಸಿರುವ ವಿಷಯಗಳ ಬಗ್ಗೆ ಅಂಥ ದಿನ ಅಥವಾ ದಿನಗಳಂದು ಅಂಥ ಯಾವುದೇ ದಿನದ ಯಾವುದೇ ಸಮಯದಲ್ಲಿ ಚರ್ಚಿಸುವ ಸ್ವಾತಂತ್ರ್ಯವನ್ನು ಸದನವು ಹೊಂದಿರತಕ್ಕದು" ಎನ್ನತಕ್ಕಂಥಾದ್ದು ಇದೆ. ಆದರೆ ಮೊನ್ನೆ ನಾನು ಮಾತನಾಡಲು ಎದ್ದು ನಿಂತಾಗ ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಮತ್ತು ಯಡಿಯೂರಪ್ಪನವರು, ಶಿವರಾಮೇಗೌಡರು ಎಲ್ಲಿಂದಲೂ ಬಂದವರು, ಶಿವರಾಮೇಗೌಡರಿಗೆ ಮಾತನಾಡಲು ಹಕ್ಕಿಲ್ಲವೇನೋ, ಸರ್ಕಾರದವರು ಮತ್ತು ಇವರೆಲ್ಲಾ ಸೇರಿ ದೊಡ್ಡ ಅಪರಾಧ ಮಾಡಿದ್ದಾರೇನೋ ಎನ್ನುವ ಭಾವನೆಯನ್ನು ವ್ಯಕ್ತ ಮಾಡಿದರು. ಇದಕ್ಕಾಗಿ ನೀವು ನನ್ನ ರಕ್ಷಣೆಗೆ ಬರಬೇಕು. ರಾಜ್ಯಪಾಲರ ವಂದನಾ ನಿರ್ಣಯದ ಮೇಲೆ ಭಾಷಣ ಮಾಡತಕ್ಕಂಥ ಹಕ್ಕು ಆಡಳಿತ ಪಕ್ಷದವರಿಗೆ ಮಾತ್ರವಲ್ಲ, ಸದನದ ಸದಸ್ಯರಾದ ಯಾರು ಬೇಕಾದರೂ ಮಾತನಾಡಬಹುದು ಎನ್ನತಕ್ಕಂಥಾದ್ದರ ಬಗ್ಗೆ ಕಾನೂನು ಚೌಕಟ್ಟಿನಲ್ಲಿ ಸದನದ ನಿಯಮಾವಳಿಗಳ ಪ್ರಕಾರ ಅವಕಾಶವಿರುವುದರಿಂದ ಅದನ್ನು ತಾವು ನನಗೆ ತಿಳಿಸಬೇಕು ಎಂದು ಈ ಸಂದರ್ಭದಲ್ಲಿ ನಾನು ತಮ್ಮನ್ನು ಕೋರುತ್ತೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಆದರೆ ಆಡಳಿತ ಪಕ್ಷದವರಲ್ಲವರಿಗೆ ರಾಜ್ಯಪಾಲರ ಭಾಷಣಕ್ಕೆ ವಂದನೆ ಸಲ್ಲಿಸುವುದಕ್ಕೆ ಆಡಸ್ತ ಪಕ್ಷದಿಂದ ಶಿಫಾರಸ್ಸು ಬಂದು ಶ್ರೀ ಶಿವರಾಮೇಗೌಡರು ಭಾಷಣ ಮಾಡುತ್ತಿದ್ದಾರಲ್ಲಾ ಅದು ತಪ್ಪು ಎಂದು ಹೇಳುತ್ತಿದ್ದೇನೆ. ಏಕೆಂದರೆ ಒಂದು ಸರ್ಕಾರವನ್ನು ರಚನೆ ಮಾಡಿರತಕ್ಕಂಥ ರಾಜಕೀಯ ಪಕ್ಷದಲ್ಲಿ ಒಬ್ಬರು ಎದ್ದು ನಿಂತು ವಂದನಾ ನಿರ್ಣಯವನ್ನು ಮಂಡಿಸತಕ್ಕಂಥ ಯೋಗ್ಯತೆ ಅವರಿಗೆ ಬರುವುದಿಲ್ಲ ಎಂದರೆ

ಅವರು ಸರ್ಕಾರ ನಡೆಸುತ್ತಾರೇನು? ನಿಮ್ಮನ್ನು ಭಾಷಣ ಮಾಡುವುದಕ್ಕೆ ಸರ್ಕಾರದ ಪರವಾಗಿ ಬಾಡಿಗೆ ತರಹದಲ್ಲಿ ತೆಗೆದುಕೊಳ್ಳುವ ಅವಶ್ಯಕತೆಯಾದರೂ ಏನಿತ್ತು?

ಶ್ರೀ ಎಲ್.ಆರ್. ಶಿವರಾಮೇಗೌಡ :— ನೀವು ಕೇಳುತ್ತಿರುವ ರೀತಿ ನೋಡಿದರೆ ಇನ್ನು ಯಾರು ಸರ್ಕಾರವನ್ನು ನಡೆಸುತ್ತಿದ್ದಾರೆ. ಸರ್ಕಾರವೇ ಆಡಳಿತ ನಡೆಸುತ್ತಿರುವುದು. ಆ ಸರ್ಕಾರದ ಜೊತೆಯಲ್ಲಿ ನಾನೂ ಒಬ್ಬ ಸಹಸದಸ್ಯನಾಗಿ ಇಲ್ಲಿ ಭಾಷಣ ಮಾಡುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಆಡಳಿತ ಪಕ್ಷದ ವಿರುದ್ಧವಾಗಿ ಚುನಾವಣೆಗೆ ನಿಂತು ಆರಿಸಿ ಬಂದವರು ನೀವು.

ಶ್ರೀ ಎಲ್.ಆರ್. ಶಿವರಾಮೇಗೌಡ :— ಕಳೆದ ಸಲ ನಿಮ್ಮ ಪಕ್ಷದ ವಿರುದ್ಧವಾಗಿ ಕೂಡ ನಾನು ನಿಂತು ಆರಿಸಿ ಬಂದಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— ಆಡಳಿತ ಪಕ್ಷದ ವಿರುದ್ಧವಾಗಿ ತಾವು ಆರಿಸಿ ಬಂದಿದ್ದು, ನಿಮ್ಮ ಕೈಯಿಂದಲೇ ರಾಜ್ಯಪಾಲರ ಭಾಷಣದ ಮೇಲೆ ವಂದನಾನಿರ್ಣಯವನ್ನು ಮಂಡಿಸುವಂಥ ಸ್ಥಿತಿ ಆಡಳಿತ ಪಕ್ಷಕ್ಕೆ ಬಂದಿರುವುದನ್ನು ನೋಡಿದರೆ ಇದು ನಾಚಿಕೆ ಪಡಬೇಕಾದ ಸಂಗತಿಯಲ್ಲವೇನು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ಸಹಸದಸ್ಯರನ್ನು ರಾಜ್ಯಪಾಲರ ಭಾಷಣದ ವಂದನಾನಿರ್ಣಯದ ಮಂಡನೆ ಮಾಡಲು ಸೇರಿಸಿಕೊಂಡುದ್ದಾರೆ. ಅದರ ಅರ್ಥ ಜನತಾದಳದವರು ಎಲ್ಲರೂ ಎಲ್ಲವನ್ನೂ ಶ್ರೀ ಶಿವರಾಮೇಗೌಡರಿಗೆ ಒಪ್ಪಿಸಿಬಿಟ್ಟು ಹೋಗಿಬಿಟ್ಟಿದ್ದಾರೆಂದು ತೋರುತ್ತದೆ. ಏನಾದರೂ ಇವರಿಗೆ ಗುತ್ತಿಗೆಗೆ ಕೊಟ್ಟಿದ್ದಾರೆಯೇ?

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಅಧ್ಯಕ್ಷರೆ, ತಾವು ನನ್ನ ಸಹಾಯಕ್ಕೆ ಬರಬೇಕು.

ಅಧ್ಯಕ್ಷರು:— ನಾನು ನಿಮ್ಮ ಸಹಾಯಕ್ಕೆ ಇದ್ದೇನೆ. ಅವರೆಲ್ಲರೂ ಹೇಳುವುದು ಏನೆಂದರೆ 116 ಜನ ಇರತಕ್ಕಂಥ ಜನತಾದಳದಲ್ಲಿ ಸಂಪ್ರದಾಯ ಪ್ರಕಾರ ಸಾಮಾನ್ಯವಾಗಿ ಆಡಳಿತ ಪಕ್ಷದಿಂದ ಒಬ್ಬ ಅನುಭವಿ ಸದಸ್ಯರು ಎದ್ದು ನಿಂತು ರಾಜ್ಯಪಾಲರ ಭಾಷಣಕ್ಕೆ ವಂದನಾನಿರ್ಣಯದ ಮಂಡನೆ ಮಾಡುವುದು ಹಾಗೂ ಮತ್ತೊಬ್ಬರು ಅನುಮೋದನೆ ಮಾಡುವುದು ಸಂಪ್ರದಾಯ, ಇದು ರೂಲ್ಸ್ ಅಲ್ಲ, ಇಂಥ ದುಸ್ಥಿತಿ ಆ ಪಕ್ಷಕ್ಕೆ ಬಂದಿದೆಯಾ ಎಂದು ಒಂದು ತರಹ ವ್ಯಂಗ ಮಾಡುವ ರೀತಿಯಲ್ಲಿ ಹೇಳಿದರು. ಇದೆಲ್ಲಾ ಸಂಸದೀಯ ಪ್ರಜಾಪ್ರಭುತ್ವದಲ್ಲಿ ಇದದ್ದೇ. ನಾನೂ ಶಿವರಾಮೇಗೌಡರನ್ನು ಸಹಸದಸ್ಯ ಎಂದರೆ ಒಪ್ಪುವುದಿಲ್ಲ, ಅವರು ಸಂಪೂರ್ಣ ಸದಸ್ಯರು. ನಿಮಗೆ ಸಿಕ್ಕಿದಷ್ಟು ಪೂರ್ತಿ ಸದಸ್ಯರಾದವರಿಗೆ ಏನು ಸಿಕ್ಕಿದೆ? ನಿವು ಸಂಪೂರ್ಣ ಸದಸ್ಯರು, ಬೇರೆಯವರೆಲ್ಲಾ ಸಹಸದಸ್ಯರು.

ಶ್ರೀ ಎಂ.ಪಿ. ಪ್ರಕಾಶ್ :— ಮಾನ್ಯ ಅಧ್ಯಕ್ಷರೆ, ನಮ್ಮ ಪಕ್ಷಕ್ಕೆ ಅಂಥ ದುಸ್ಥಿತಿ ಏನೂ ಬಂದಿಲ್ಲ. ಮಾನ್ಯ ತಿಮ್ಮಪ್ಪನವರು ಲೇವಡಿ ಮಾಡಿದರು, ಅಂಥ ದುಸ್ಥಿತಿ ಇಲ್ಲ ಎಂದು ತಮಗೂ ಗೊತ್ತಿದೆ.

ಅಧ್ಯಕ್ಷರು :— ಹಾಗೇನಿಲ್ಲ, ಅವರ ಅಭಿಪ್ರಾಯ ಹಾಗೆ ಇದೆ ಎಂದು ಹೇಳಿದೆ ಅಷ್ಟೆ. ಒಂದು ವೇಳೆ ನಿಮಗೆ ಹಾಗೆ ಬಂದರೂ ಸಹ ನಾನು ಹೇಳುವ ಹಾಗಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ :— ಮಾನ್ಯ ಅಧ್ಯಕ್ಷರೆ, ದುಸ್ಥಿತಿಯಲ್ಲಿ ಇಲ್ಲ ಎಂದು ಮಾನ್ಯ ಪ್ರಕಾಶ್‌ರವರು ಹೇಳಿದರು. ಅದನ್ನು ಒಪ್ಪಿಕೊಳ್ಳೋಣ. ಆದರೆ ಸುಸ್ಥಿತಿಯಲ್ಲಾದರೂ ಇದ್ದೀರ್ವೋ?

ಶ್ರೀ ಎಂ.ಪಿ. ಪ್ರಕಾಶ್ :— ಅನೇಕ ವಿಚಾರಗಳ ಬಗ್ಗೆ ಮಾತನಾಡತಕ್ಕಂಥ ಸಮರ್ಥರು ಕೂಡ ಇಲ್ಲಿ ಇದ್ದಾರೆ. ಅಷ್ಟೇ ಸಮರ್ಥರಾಗಿರತಕ್ಕಂಥ ನಮ್ಮ ಸಹಸದಸ್ಯರಿಗೆ ವಂದನಾನಿರ್ಣಯವನ್ನು ಮಂಡನೆ ಮಾಡುವುದಕ್ಕೆ ಒಪ್ಪಿಸಿದ್ದೇವೆ.

ಅಧ್ಯಕ್ಷರು :— ಮಾನ್ಯ ಪ್ರಕಾಶ್‌ರವರೇ, ನೆನ್ನೆಯ ದಿವಸ ಬಹಳ ಚೆನ್ನಾಗಿ ಸದನದಲ್ಲಿ ಮಾತನಾಡಿದಿರಿ.

ಶ್ರೀ ಎಂ.ಪಿ. ಪ್ರಕಾಶ್ :— ವಂದನೆಗಳು ಸಾರ್

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಅಧ್ಯಕ್ಷರೆ, ನನ್ನ ಮೇಲೆ ಬಹಳ ವಿಶ್ವಾಸವನ್ನಿಟ್ಟುಕೊಂಡಿರುವವರು ನೀವು. ನಾನು ಒಂದಾನೊಂದು ಕಾಲದಲ್ಲಿ ರಾಜಕೀಯದಲ್ಲಿ ಬಹಳ ತೊಂದರೆಯನ್ನು ಅನುಭವಿಸುತ್ತಿರತಕ್ಕಂಥ ಕಾಲದಲ್ಲಿ ಎಲ್ಲವನ್ನೂ ಬದಿಗೊತ್ತಿ ಸಹಾಯವನ್ನು ಮಾಡಿದಂಥ ಕೀರ್ತಿ ನಮ್ಮ ಅಧ್ಯಕ್ಷರಿಗೆ ಹೋಗಬೇಕಾಗುತ್ತದೆ. ಆದರೆ ಮೊನ್ನೆಯ ದಿವಸ ಮಾತನಾಡತಕ್ಕಂಥ ಸಂದರ್ಭದಲ್ಲಿ ನನ್ನನ್ನು ಬೈಯ್ಯಬೇಕೆಂದು ಹೇಳಿದರೋ ಅಥವಾ ಯಾವ ಉದ್ದೇಶದಿಂದ ಹೇಳಿದರೋ ಗೊತ್ತಾಗಲಿಲ್ಲ. ಪೇಪರಿನಲ್ಲಿ ಬಂದಿರುವುದನ್ನು ಓದುತ್ತೇನೆ. "ಅವರು ನಿರ್ಣಯವನ್ನು ಮಂಡಿಸಲು ಆಡಳಿತ ಪಕ್ಷದಲ್ಲಿರುವ ಗೊಂದಲವೇ ಕಾರಣವೆಂದು ಬಿ.ಎಸ್. ಯಡಿಯೂರಪ್ಪನವರು ಹೇಳಿದಾಗ ನಿಮ್ಮಲ್ಲಿ ಇಲ್ಲವೇ ಎನ್ನುವುದು ಶ್ರೀರಾಮೇಗೌಡರ ಪ್ರಶ್ನೆ. ಬಂಡೇ ಪಕ್ಷ ಇಲ್ಲ, ನಮ್ಮದು ಬಂಡೆಯಂಥ ಪಕ್ಷ, ನಾವೆಲ್ಲಾ ಒಗ್ಗಟ್ಟಿನಿಂದ ಹೋಗುತ್ತಿದ್ದೇವೆ ಎಂದು ಕೆ.ಎಸ್. ಈಶ್ವರಪ್ಪ ಬಿ.ಜೆ.ಪಿ. ಬಗ್ಗೆ ಹೇಳಿಕೊಂಡರು. ನಿಮ್ಮ ಪಕ್ಷಕ್ಕೂ ಒಮ್ಮೆ ಸೇರಿಸಿಕೊಂಡು ನೋಡಿ ಎಂದು ಸಗೀರ್‌ಅವರು ಕೆಣಕಿದರು. ಆವರು ಖಂಡಿತಾ ನಮ್ಮ ಪಕ್ಷಕ್ಕೆ ಬೇಡ ಬೇಡ ಎಂದು ಯಡಿಯೂರಪ್ಪ ಮತ್ತು ಈಶ್ವರಪ್ಪನವರು ಒಟ್ಟೊಟ್ಟಿಗೆ ಹೇಳಿದರು. ಹಾಗೆಲ್ಲಾ ಶಿವರಾಮೇಗೌಡರನ್ನು ಕೆಣಕಬೇಡಪ್ಪ ಸಗೀರ್ ಎಂದು, ಶ್ರವಣಬೆಳಗೊಳದ ಪಕ್ಷದವರು ಅವರು ಎಂದು

ಸಭಾಧ್ಯಕ್ಷರಾದ ರಮೇಶ್ ಕುಮಾರ್‌ರವರು ಹೇಳಿದಾಗ ಸಭೆಯಲ್ಲಿ ನಗೆ. (ಬ್ರಾಕೆಟ್‌ನಲ್ಲಿ ಎಲ್ಲವನ್ನೂ ಬಿಟ್ಟವರು ಎಂದು ಬಂದಿದೆ) ನಾನು ಕೇಳುವುದು ಏನೆಂದರೆ ಇದು ಒಂದು ಹಕ್ಕುಚ್ಯುತಿ ಪ್ರಶ್ನೆಯಾಗುತ್ತದೆ. ದಯಮಾಡಿ ಈಗ ನೀವೇ ನನ್ನ ರಕ್ಷಣೆಗೆ ಬರಬೇಕು. ಮಾನ್ಯ ಅಧ್ಯಕ್ಷರೆ, ತಾವೇ ನನಗೆ ಸ್ಪಷ್ಟೀಕರಣ ಕೊಡಬೇಕು.

ಅಧ್ಯಕ್ಷರು :— ನಾನು ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಅದೇನೋ ನೀವು ಮಾತನಾಡುವಾಗ ಕೀರ್ತಿ ಸಹಾಯ ಅದೇನೋ ಹೇಳಿದಿರಿ. ನಾನು ಯಾರ ಪರವೂ ಇಲ್ಲ, ಯಾವ ವಿರೋಧನೂ ಇಲ್ಲ. ಶ್ರವಣಬೆಳಗೊಳದ ವಿಚಾರ ಹೇಳಿದ್ದು ಏನೆಂದರೆ ಗೊಮ್ಮಟೇಶ್ವರ ಒಬ್ಬ ಸ್ಥಿತಪ್ರಜ್ಞ, ಅದೇ ರೀತಿ ನೀವೂ ಕೂಡ ಒಬ್ಬ ಸ್ಥಿತಪ್ರಜ್ಞ ಎಂದು ನಾನು ಹೇಳಿದ್ದು. ಮಾನ್ಯ ನಾಣಯ್ಯನವರನ್ನು ಮತ್ತು ವೀರಪ್ಪಮೊಯಿಲಿಯವರನ್ನು ಸಹ ಕೇಳುತ್ತಿದ್ದೇನೆ, ಗೊಮ್ಮಟೇಶ್ವರ ಸ್ಥಿತಪ್ರಜ್ಞನಲ್ಲವೇ? ಏಕೆಂದರೆ ಎರಡೂ ಕಡೆಯಿಂದ ಸಾಕ್ಷಿ ಬೇಕು.

ಶ್ರೀ ಎಂ. ವೀರಪ್ಪ ಮೊಯಿಲಿ :— ಮಾನ್ಯ ಅಧ್ಯಕ್ಷರೆ, ಇದು ಬಹಳ ಉಪಯುಕ್ತವಾದಂಥ ಉಪಮೆ. ಏಕೆಂದರೆ ಯಾವ ಪಕ್ಷವೇ ಅಧಿಕಾರಕ್ಕೆ ಬರಲಿ ಹೋಗಲಿ ಆದರೆ ಶಿವರಾಮೇಗೌಡರು ಸ್ಥಿತಪ್ರಜ್ಞರು.

ಅಧ್ಯಕ್ಷರು :— ಸರಿ, ಅದನ್ನೇ ನಾನು ಹೇಳಿದ್ದು.

ಶ್ರೀ ಎಲ್.ಆರ್. ಶಿವರಾಮೇಗೌಡ :— ಒಪ್ಪಿಕೊಳ್ಳುತ್ತೇನೆ, ಮಾನ್ಯ ವೀರಪ್ಪಮೊಯಿಲಿಯವರು ಹೇಳಿದ್ದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಆದರೆ ಇದು ಸದನದಲ್ಲಿ ಯಾವಾಗಲೂ ಚರ್ಚೆ ಆಗುತ್ತಿರುತ್ತದೆ. ಉದಾಹರಣೆಗೆ ಹೇಳಬಯಸುವುದೇನೆಂದರೆ, ನಾನು 1984ನೇ ಇಸವಿಯಲ್ಲಿ ಕಾಂಗ್ರೆಸ್ ಪಕ್ಷದಲ್ಲಿಯೇ ಇದ್ದೆ. ಆದರೆ ಕಾಂಗ್ರೆಸ್‌ನವರು ನಮ್ಮನ್ನೂ ದುಡಿಸಿಕೊಂಡು ನಂತರ ಚುನಾವಣೆಗೆ ಟಿಕೆಟ್ ಕೊಡದೆಯೇ ಅನ್ಯಾಯ ಮಾಡಿ ಆಚೆಗೆ ಕಳುಹಿಸಿದರು. ಮಾನ್ಯ ವೀರಪ್ಪ ಮೊಯಿಲಿಯವರು, ಕಾಗೋಡು ತಿಮ್ಮಪ್ಪನವರು ಇಲ್ಲಿಯೇ ಇದ್ದಾರೆ. ಇವರು ಅನ್ಯಾಯ ಮಾಡಿ, ಬೆನ್ನಿಗೆ ಚೂರಿ ಹಾಕಿ ಆಚೆಗೆ ಕಳುಹಿಸಿದಾಗ ನಾನು ಮನೆಗೆ ಹೋಗಿ ಸುಮ್ಮನೆ ಕುಳಿತುಕೊಳ್ಳಬೇಕಾಗಿತ್ತೇ? ಈ ಕಾಂಗ್ರೆಸ್ ಪಕ್ಷದ ಠೇವಣಿಯನ್ನು ಕಳೆದುಕೊಂಡಿತು ನಾನು ಆಗ 31 ಸಾವಿರ ಬಹುಮತದಿಂದ ಗೆದ್ದು ಬಂದೆ. ಪುನಃ 5 ವರ್ಷ ಅವರ ಜೊತೆಯಲ್ಲಿಯೇ ಇದ್ದೆ. ನನಗೆ ಚುನಾವಣೆಗೆ ಸ್ಪರ್ಧಿಸಲು ಕಾಂಗ್ರೆಸ್ ಪಕ್ಷದಿಂದ ಟಿಕೆಟ್ ಕೊಡಿ ಸ್ವಾಮಿ ಎಂದು ಹೋಗಿ ಆ ಸಂದರ್ಭದಲ್ಲಿ ಮಾನ್ಯ ವೀರಪ್ಪಮೊಯಿಲಿಯವರನ್ನು ಕೇಳಿಕೊಂಡೆ. ಟಿಕೆಟ್ ಕೊಡಲಿಲ್ಲ. ನಮ್ಮ ಲೋಕಲ್ ಪ್ರಾಬ್ಲಮ್‌ನ್ನು ಅರ್ಥಮಾಡಿಕೊಂಡು

ಟಿಕೆಟ್ ಕೊಡುವುದಕ್ಕೆ ಆಗುವುದಿಲ್ಲವೆಂದರು. ನಾನು ಆಗ ಮನೆಗೆ ಹೋಗಬೇಕಾಗುತ್ತೇ ನನಗೆ ಜನ ಹೇಳಿದರು, ಟಿಕೆಟ್ ಕೊಡುವವರು ಮೊಯಿಲಿಯವರು ಅಲ್ಲ, ಕಾಂಗ್ರೆಸ್ ಪಕ್ಷದವರು ಅಲ್ಲ ನಾವು ಕೊಡುತ್ತೇವೆ ಬಾರಣ್ಣಾ ಎಂದು ಕರೆದರು. ಒಂದು ಮಾತು ಹೇಳುತ್ತೇನೆ, ಇಂಡಿಫೆಂಡೆಂಟ್‌ಆಗಿ ಗೆದ್ದೆ ಚುನಾವಣೆಯಲ್ಲಿ ಸ್ಪರ್ಧಿಸಿ ಆರಿಸಿ ಈ ಸದನಕ್ಕೆ ಬರತಕ್ಕಂಥವರ ಸಂಖ್ಯೆ ಎಷ್ಟು? ಆ ಧೈರ್ಯ ಯಾರಿಗೆ ಇದೆ? ಅವರ ಶಕ್ತಿಯನ್ನು ಮೆಚ್ಚಬೇಕು ಎನ್ನತಕ್ಕಂಥದ್ದನ್ನೂ ಕೂಡ ತಾವು ಹೇಳಿದಿರಿ. ನನಗೆ ಯಾರದ್ದೂ ಟಿಕೇಟ್ ಬೇಕಾಗಿಲ್ಲ. ನಾನು ಇನ್ನೊಂದು ಸಾರಿ ಕೂಡ ಇಂಡಿಪೆಂಡೆಂಟ್ ಆಗಿ ಹೋಗಿ ಗೆದ್ದು ಬರುವ ಶಕ್ತಿ ಇದೆ. ಆದರೆ ಇದನ್ನು ನೀವೆಲ್ಲಾ ಮೆಚ್ಚಬೇಕಾದ ವಿಚಾರ ಒಬ್ಬ ಯುವಕನಾಗಿ ಒಂದೇ ಕ್ಷೇತ್ರದಲ್ಲಿ ಮೂರು ಸಾರಿ ಚುನಾವಣೆಯಲ್ಲಿ ಗೆಲ್ಲತಕ್ಕಂಥ ಶಕ್ತಿ ಇದೆಯೆಂದು ಹೇಳಿದರೆ ನಿಜವಾಗಿಯೂ ನೀವು ನಮ್ಮನ್ನು ಮೆಚ್ಚಬೇಕು. ಇವರು ಯಾವ ಪಕ್ಷ ಆಡಳಿತಕ್ಕೆ ಬಂದರೂ ಅದರಲ್ಲಿ ಇರುತ್ತಾರೆಂದು. ಈಗ ತಾನೆ ಮಾನ್ಯ ಮೊಯಿಲಿ ಸಾಹೇಬರು ಹೇಳಿದರು. ಆದರೆ ಯಾವುದೇ ಪಕ್ಷ ಆಡಳಿತವನ್ನು ನಡೆಸುತ್ತಿದ್ದರೆ ಇವರು ಆ ಪಕ್ಷಕ್ಕೆ ಹೋಗುವುದಕ್ಕೆ ಆಗುತ್ತದೆಯೇ?

ಶ್ರೀ ಬಿ.ಎಸ್. ಈಶ್ವರಪ್ಪ :— ಮಾನ್ಯ ಶಿವರಾಮೇಗೌಡರೆ, ಚುನಾವಣೆಯಲ್ಲಿ ತಾವು ಸ್ವತಂತ್ರವಾಗಿ ನಿಂತು ಗೆದ್ದು ಬರುವುದಕ್ಕೆ ಮಾನ್ಯ ಮೊಯಿಲಿಯವರೇ ಸಹಾಯ ಮಾಡಿದ್ದಾರೆ. ಅದು ನಿಮಗೆ ಒಳ್ಳೆಯದಾಯಿತಲ್ಲವೇ?

ಶ್ರೀ ಕಾಗೋಡು ತಿಮ್ಮಪ್ಪ :— ಮಾನ್ಯ ಸದಸ್ಯರು ರಾಜ್ಯಪಾಲರ ಭಾಷಣದ ವಂದನಾನಿರ್ಣಯವನ್ನು ಮಂಡಿಸಿದ್ದಾರೆ. ಆದರೆ ಈಗ ಅವರು ರಾಜಕೀಯ ನಿರ್ಣಯವನ್ನು ಮಾತನಾಡುತ್ತಿದ್ದಾರೆ.

ಶ್ರೀ ಕೆ.ಎನ್. ನಾಗೇಗೌಡ :— ಮಾನ್ಯ ಅಧ್ಯಕ್ಷರು ಏನು ಹೇಳಿದ್ದು ಎಂದರೆ, ಜೈನರಿಗೆ ಸಂಬಂಧಪಟ್ಟ ಗೊಮ್ಮಟೇಶ್ವರ ಧರ್ಮಸ್ಥಳ ಮತ್ತು ಶ್ರವಣಬೆಳಗೊಳದಲ್ಲಿ ಇದೆ. ನಿಮ್ಮ ನಾಗಮಂಗಲ ಕೂಡ ಚನ್ನರಾಯಪಟ್ಟಣಕ್ಕೆ ಹತ್ತಿರ ಇದೆ. ಅದು ಬಹಳ ಗಟ್ಟಿಯಾದ ಸ್ಥಳ. ಕಲ್ಲುಬಂಡೆಯಂಥ ಸ್ಥಳ. ಇಂಥ ಹಾವಳಿಗಳನ್ನು ತಡೆಗಟ್ಟುವುದಕ್ಕೆ, ಗಟ್ಟಿಯಾದ ರಾಜಕೀಯ ಶಕ್ತಿ ನಿಮಗೆ ಇದೆಯೆಂದು ಕಾಂಪ್ಲಿಮೆಂಟ್ ಮಾಡಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಅಧ್ಯಕ್ಷರು ನನ್ನ ಆತ್ಮೀಯ ಗುರುಗಳು. ಎಂದು ಕರೆದರೂ ತಪ್ಪೇನೂ ಆಗುವುದಿಲ್ಲ. ಅಧ್ಯಕ್ಷರು ಆ ಭಾವನೆ ಇಟ್ಟುಕೊಂಡು ಹೇಳಿದರು. ಕೆಲವರಿಗೆ ಆ ಭಾವನೆ ಇಲ್ಲ. ಯಾವ ಭಾವನೆಯನ್ನು ವ್ಯಕ್ತಪಡಿಸಿ ಹೇಳಿದ್ದಾರೆ. ಎನ್ನುವುದನ್ನು ಮಾನ್ಯ ಅಧ್ಯಕ್ಷರು ಸದನದಲ್ಲಿ ಹೇಳಿಬಿಟ್ಟರೆ ಸಾಕು.

ಅಧ್ಯಕ್ಷರು :— ಅವರು ನೋಡುವ ಕನ್ನಡಕ ಅಂಥದ್ದು ಆದರೆ ನಾನು ಏನು ಮಾಡಲಿ?

ಶ್ರೀ ಎಂ.ಪಿ. ಪ್ರಕಾಶ್ :— ಭರತವರ್ಷದಲ್ಲಿ ಬಾಹುಬಲಿ ಇಡೀ ದಿಗ್ವಿಜಯ ಮಾಡಿ ಗೆದ್ದಂಥ ಸಮಯದಲ್ಲಿ ಬೆತ್ತಲೆ ನಿಂತು ಆತ ಸ್ಥಿತಪ್ರಜ್ಞ ಆದ. ಇವರೂ ಕೂಡ ಎರಡು ಸಲ ಗೆದ್ದು ಸ್ಥಿತಪ್ರಜ್ಞರಾಗಿದ್ದಾರೆಂದು ಅದರ ಅರ್ಥ.

ಅಧ್ಯಕ್ಷರು :— ಆತನಿಗೆ (ಗೊಮ್ಮಟೇಶ್ವರ) ನಿಮಗೆ ವ್ಯತ್ಯಾಸವೇನೆಂದರೆ ಆತ ಸುಮ್ಮನೆ ನಿಂತಿದ್ದಾರೆ, ನೀವು ಸಫಾರಿ ಹಾಕಿಕೊಂಡು ನಿಂತಿದ್ದೀರಿ.

ಶ್ರೀ ಸಿ. ಬೈರೇಗೌಡ :— ಮಾನ್ಯ ಅಧ್ಯಕ್ಷರೆ, ಶ್ರೀ ಶಿವರಾಮೇಗೌಡರು ತಮ್ಮನ್ನು ಆತ್ಮೀಯ ಗುರುಗಳೆಂದರು. ಅವರ ಗುರುಗಳು ಮತ್ತೊಬ್ಬರು (ಶ್ರೀ ನಾಗೇಗೌಡರು) ಇಲ್ಲಿ ಕುಳಿತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಅಧ್ಯಕ್ಷರೆ, ಇವತ್ತೂ ಕೂಡ ಯಾವುದೇ ಪಕ್ಷದ ಟಿಕೆಟ್ ಇಲ್ಲದೆಯೇ ಇಂಡಿಪೆಂಡೆಂಟ್‌ಆಗಿ ಗೆಲ್ಲತಕ್ಕಂಥ ಶಕ್ತಿಯನ್ನು ನಾನು ಇಟ್ಟುಕೊಂಡಿದ್ದೇನೆ. ಯಾವುದೇ ಪಕ್ಷದ ಟಿಕೆಟ್ ಇಲ್ಲದೆಯೇ ಎಷ್ಟು ಜನ ಗೆದ್ದು ಸದನದೊಳಕ್ಕೆ ಬರುವುದಕ್ಕಾಗುತ್ತದೆ ಎನ್ನುವುದನ್ನು ಸ್ವಲ್ಪ ಯೋಚನೆ ಮಾಡಿ ಎಂದು ಹೇಳುತ್ತಿದ್ದೇನೆ. ಇಷ್ಟು ಹೇಳುತ್ತಾ ಕೃಷಿ ಬಗ್ಗೆ ಮೊನ್ನೆ ಪ್ರಸ್ತಾಪ ಮಾಡುತ್ತಿದ್ದೆ. ಕೃಷಿಗೆ ಅವಲಂಬಿತರಾಗಿರತಕ್ಕಂಥ ರೈತರ ಬಗ್ಗೆ ನಾವು ಎಲ್ಲಾ ಓಟು ತೆಗೆದುಕೊಳ್ಳತಕ್ಕಂಥ ಸಂದರ್ಭದಲ್ಲಿ ರೈತರ ಬಗ್ಗೆ ಬಹಳ ದೊಡ್ಡ ಭಾಷಣ ಮಾಡುತ್ತೇವೆ. ರೈತರನ್ನು ನಿಮ್ಮನ್ನು ಇಂದ್ರ, ಚಂದ್ರರನ್ನಾಗಿ ಮಾಡುತ್ತೇನೆ, ನಿಮ್ಮ ಸಂಕಷ್ಟದಲ್ಲಿ ಭಾಗಿಗಳಾಗುತ್ತೇನೆಂದು ಹೇಳಿ ಅಧಿಕಾರಕ್ಕೆ ಬರುತ್ತಾರೆ, ಸರ್ಕಾರ ನಡೆಸುವುದಕ್ಕೆ ಬರುತ್ತಾರೆ, ಆದರೆ, ಸರ್ಕಾರವನ್ನು ನಡೆಸಿದ ಎಷ್ಟು ಜನ ಪುಣ್ಯಾತ್ಮರು ಇವತ್ತಿನವರೆಗೆ ರೈತರ ಬಗ್ಗೆ ಕಾಳಜಿ ವಹಿಸಿದ್ದಾರೆ? ನಾನು ಹಾಗೆ ಅಂದ ತಕ್ಷಣ, ಕೃಷಿ ಪತ್ರ ಕೊಟ್ಟ ತಕ್ಷಣ, ಹೊಸ ತಂತ್ರಜ್ಞಾನವನ್ನು ಅಳವಡಿಸಿದ ತಕ್ಷಣ, ರೈತರೆಲ್ಲಾ ಉದ್ಧಾರವಾಗುತ್ತಾರೆಂಬುದನ್ನು ನಾನು ಹೇಳುವುದಿಲ್ಲ. ಆದರೆ, ಈ ಸರ್ಕಾರ ಬೆಂಗಳೂರಿನಲ್ಲಿ ಡ್ಯಾನ್ಸ್ ಮಾಡಿದವರಿಗೆ, ಸಿನಿಮಾದಲ್ಲಿ ಕುಣಿದವರಿಗೆ, ಚೆನ್ನಾಗಿ ಡ್ರೆಸ್ ಮಾಡಿಕೊಂಡವರಿಗೆ, ಆಳು ದಪ್ಪಗಿರುವವರಿಗೆ ಪ್ರಶಸ್ತಿ ಕೊಡುತ್ತದೆ. ಆದರೆ, ದೇಶಕ್ಕೆ ಅನ್ನ ಕೊಡುವ, ಬಟ್ಟೆ ಕೊಡುವ ರೈತನನ್ನು ಗುರುತಿಸಿ, ರಾಜ ಗೌರವ ಕೊಟ್ಟು, ಸರ್ಕಾರದ ಮೂಲಕ ವಿಧಾನ ಸೌಧದ ಮೆಟ್ಟಿಲಿನಲ್ಲಿ ಒಂದು ಲಕ್ಷ ರೂಪಾಯಿಗಳನ್ನು ಪ್ರಶಸ್ತಿ ರೂಪದಲ್ಲಿ ಕೊಟ್ಟಂಥ ಕೀರ್ತಿ ಪಟೇಲರು ಬೈರೇಗೌಡರಿಗೆ ಸೇರುತ್ತದೆಯೇ ಹೊರತು ಬೇರೆಯವರಿಗಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ಒಬ್ಬ ರೈತ ಚೆನ್ನಾಗಿ ಹೋರಿ ಸಾಕಿದರೆ, ಭತ್ತ ಬೆಳೆದಿದ್ದರೆ, ಕೃಷಿಯಲ್ಲಿ ಅಭಿವೃದ್ಧಿ ಮಾಡಿದ್ದರೆ ಅವನನ್ನು ಗುರುತಿಸಬೇಕು.

ಶ್ರೀ ಕಾಗೋಡು ತಿಮ್ಮಪ್ಪ :— ಶ್ರೀ ಬೈರೇಗೌಡರು ಕೃಷಿ ಮಂತ್ರಿಗಳು, ಇಲ್ಲೇ ಇದ್ದಾರೆ. ನಿಮ್ಮ ಇಲಾಖೆಯಲ್ಲೇ ಸರ್ಕಾರದ ಆಜ್ಞೆ ಕೂಡ ಇದೆ. ಕೃಷಿಕರಿಗೆ ಈ ರೀತಿಯಿಂದ ಸನ್ಮಾನ ಮಾಡುವುದು ಎಂದಿನಿಂದ ಬಂದಿದೆ ಎಂಬುದನ್ನು ಹೇಳಿದರೆ ಶ್ರೀಶಿವರಾಮೇಗೌಡರು ಮಾಡುವ ವಾದಕ್ಕೆ ಸ್ವಲ್ಪ ಅರ್ಥ ಬರುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಸರ್ಕಾರಿ ಆಜ್ಞೆ ಇದೆ ಎಂದು ಕಾಣುತ್ತದೆ. ನೀವು ಏಕೆ ಮಾಡಿರಲಿಲ್ಲ? ನಾನು ಒಪ್ಪಿಕೊಳ್ಳುತ್ತೇನೆ, ವಿಧಾನಸೌಧದ ಮೆಟ್ಟಲಿಗೆ ಒಬ್ಬ ರೈತನನ್ನು ಕರೆದು, ನೀನು ಚೆನ್ನಾಗಿ ಮಾಡಿದ್ದೀರಿಯಾ ಎಂದು ಹೇಳಿದ್ದು ಈ ಸರ್ಕಾರ. ಕಾಂಗ್ರೆಸ್‌ನಲ್ಲಿ ನಾನೂ ಇದ್ದೆ.

ಶ್ರೀ ಕಾಗೋಡು ತಿಮ್ಮಪ್ಪ :— ವಿಧಾನಸೌಧದ ಮೆಟ್ಟಲಿಗೆ ಕರೆಸಿ, ಚಪ್ಪರ ಹಾಕಿ ಸನ್ಮಾನ ಮಾಡದೇ ಇರಬಹುದು. ಆದರೆ, ರೈತನ ಮನೆ ಮನೆ ಬಾಗಿಲಿಗೆ ಹೋಗಿ ಕೊಟ್ಟು ಬಂದಿದ್ದು ಹೌದು.

ಶ್ರೀ ಎಲ್.ಆರ್. ಶಿವರಾಮೇಗೌಡ :— ನನಗೆ ಗೊತ್ತಿರುವ ಹಾಗೆ, ಅವರು ರೈತನ ಮನೆ ಬಾಗಿಲಿಗೆ ಹೋಗಿರಲಿಲ್ಲ. ಬೇರೆಯವರ ಮೂಲಕ ಬೇರೆ ಕಡೆಗೆ ಹೋಗಿದೆ. ಅಂಥ ಮಿಸ್‌ಯೂಸ್ ಆಗಬಾರದು.

ಶ್ರೀ ಕಾಗೋಡು ತಿಮ್ಮಪ್ಪ :— ಮಿಸ್‌ಯೂಸ್ ಆಗಿದೆಯೇ?

ಶ್ರೀ ಸಿ. ಬೈರೇಗೌಡ (ಕೃಷಿ ಮಂತ್ರಿಗಳು) :— ರೈತರಿಗೆ ಪ್ರಶಸ್ತಿಯನ್ನು ತಲುಪಿಸಿದ್ದು ನಮ್ಮ ಸರ್ಕಾರ ಬಂದ ಮೇಲೆ ಮಾತ್ರ. ರೈತನನ್ನು ವಿಧಾನಸೌಧದ ಮೆಟ್ಟಲಿಗೆ ರೈತನಾಗಿ ಕರೆದು, ನೀನು ಅನ್ನದಾ, ಈ ಸಮಾಜವನ್ನು ಸೃಷ್ಟಿ ಮಾಡಿದ್ದೀಯಾ ಸಂಸ್ಕೃತಿಗಳನ್ನು ಸೃಷ್ಟಿ ಮಾಡಿದ್ದೀಯಾ ದೇಶವನ್ನು ಎಲ್ಲರಿಗಿಂತ ಹೆಚ್ಚಿನ ರೀತಿಯಲ್ಲಿ ರಕ್ಷಣೆ ಮಾಡಿದ್ದೀಯಾ ಇಡೀ ಸಮಾಜ ನಿನಗೆ ಧನ್ಯವಾದಗಳನ್ನು ಅರ್ಪಿಸಬೇಕಾಗಿತ್ತು. ಇಲ್ಲಿಯವರೆಗೆ ಲೋಪವಾಗಿದೆ. ಆ ಧನ್ಯವಾದಗಳನ್ನು ಅರ್ಪಿಸುವ ಕೆಲಸವೇನಾದರೂ ಪ್ರಾರಂಭವಾಗಿದ್ದರೆ ಅದು ನಮ್ಮ ಸರ್ಕಾರ ಬಂದ ಮೇಲೆ ಆಗಿದೆ ಎಂದು ನಾನು ಹೇಳುತ್ತೇನೆ. ಹಿಂದೆಂದೂ ಕೊಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— 10 ಸಾವಿರ ರೂಪಾಯಿಗಳನ್ನು ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕೊಟ್ಟಿದ್ದೇನೆ.

ಶ್ರೀ ಸಿ. ಬೈರೇಗೌಡ :— ತಲುಪಿಸಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ :— ಕೊಟ್ಟಿದ್ದರೆ?

ಶ್ರೀ ಯು.ಆರ್. ಸಭಾಪತಿ :— ತಾವು ಮಾಹಿತಿ ತಿಳಿದುಕೊಂಡು ಮಾತನಾಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನನಗೂ ತಿಳಿದ ಮಟ್ಟಿಗೆ, ಈ ಸರ್ಕಾರ ಬಂದ ಮೇಲೆ ನಿಜವಾದ ರೈತರಿಗೆ ಒಂದು ಲಕ್ಷ ರೂಪಾಯಿಗಳ ಪ್ರಶಸ್ತಿ ಕೊಟ್ಟಿದೆ. ನಾನು 10 ವರ್ಷಗಳಿಂದ ಈ ಸದನದಲ್ಲಿರುವವನು. ಈ ಅವಧಿಯಲ್ಲಿ ಬೆಳೆ ಬೆಳೆದ ರೈತನಿಗೆ ಪ್ರಶಸ್ತಿ ಕೊಟ್ಟಿದ್ದನ್ನು ನಾನು ಕಣ್ಣಾರೆ ನೋಡಿದ್ದು ಈಗಲೇ. ಕಳೆದ 5 ವರ್ಷಗಳಲ್ಲಿ ನಾನಿದ್ದೆ, ಏಕೆ ನನಗೆ ಗೊತ್ತಾಗಲಿಲ್ಲ? ಆದ್ದರಿಂದ ರೈತನನ್ನು ಗುರುತಿಸಿದ ಸರ್ಕಾರ ಇದೆಂದು ತಮಗೆ ಜ್ಞಾಪಕ ಮಾಡುತ್ತಿದ್ದೇನೆ.

ಶ್ರೀ ಕಾಗೋಡು ತಿಮ್ಮಪ್ಪ :— 1993-94ನೇ ಇಸವಿಯಲ್ಲಿ ಕೊಟ್ಟಿದ್ದರೆ?

ಶ್ರೀ ಎಲ್.ಆರ್. ಶಿವರಾಮೇಗೌಡ :— ನಾನು ಪ್ರಾಮಾಣಿಕವಾಗಿ ಹೇಳುತ್ತೇನೆ, ಕೊಟ್ಟಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಶ್ರೀ ಶಿವರಾಮೇಗೌಡರು ಕಣ್ಣು ತೆರೆದಿದ್ದೇ ಅವರು ಹೌಸಿಂಗ್ ಬೋರ್ಡ್ ಛೇರ್ಮನ್‌ರಾದ ಮೇಲೆ. ಅಂದ ಮೇಲೆ ಸಹಜವಾಗಿ ಅವರು ಹಿಂದೆ ಕಣ್ಣುಮುಚ್ಚಿಕೊಂಡಿದ್ದರು ಎಂದಾಗುತ್ತದೆ. ಅಂದ ಮೇಲೆ ಹೇಗೆ ಗೊತ್ತಾಗುತ್ತದೆ?

ಶ್ರೀ ಎಲ್.ಆರ್. ಶಿವರಾಮೇಗೌಡ :— ಅದಲ್ಲದೆ, ಯಾವುದೇ ಕೃಷಿ ಉತ್ಪನ್ನಗಳನ್ನು ಬೆಳೆಯುವುದು ಸರ್ಕಾರದ ಕೈಯಲ್ಲೂ ಇಲ್ಲ, ರೈತನ ಕೈಯಲ್ಲೂ ಇಲ್ಲ. ಒಂದೊಂದು ಸಾರಿ ರೈತನಿಗೆ ಬಂಪರ್ ಬೆಳೆ ಬರುತ್ತದೆ. ಅವರು ಏನನ್ನು ಬೇಕಾದರೂ ತೆಗೆದುಕೊಳ್ಳಬಹುದು, ಆನಂದವಾಗಿರಬಹುದು. ಆದೇ ರೈತ ಒಂದೊಂದು ಸಾರಿ ತನ್ನ ಹೆಂಡತಿಯ ತಾಳಿಯನ್ನು ಅಡವಿಡುವ ದುಸ್ಥಿತಿಗೂ ಹೋಗುತ್ತಾನೆ.

ಶ್ರೀ ಕಾಗೋಡು ತಿಮ್ಮಪ್ಪ :— ಶ್ರೀ ಬೈರೇಗೌಡರು ಟಮೋಟೋವನ್ನು ಬೀದಿಯಲ್ಲಿ ಸುರಿದರು. ಇವತ್ತೇನಾಗಿದೆ?

ಶ್ರೀ ಸಿ. ಬೈರೇಗೌಡ :— ವಿಧಾನಸೌಧದ ಎದುರುಗಡೆ ತರಕಾರಿಯನ್ನು ನಾನು ತಂದು ಸುರಿದದ್ದು ನಿಜ. ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ, ಅಂದು ಪರಿಸ್ಥಿತಿ ಏನಿತ್ತೆಂದರೆ, ಇಡೀ ದೇಶದಲ್ಲಿ ಮೋಟಾರು ವಾಹನಗಳ ಮುಷ್ಕರ ನಡೆಯುತ್ತಿತ್ತು. ಸುಮಾರು 10-15 ದಿವಸಗಳು ಒಂದು ಲಾರಿ ಕೂಡ ಒಂದೆಡೆಯಿಂದ ಇನ್ನೊಂದೆಡೆಗೆ ಚಲಿಸಲಿಲ್ಲ. ಆದ್ದರಿಂದ, ರೈತರು ಬೆಳೆದ ಹಣ್ಣು, ತರಕಾರಿಗಳನ್ನು ಸಾಗಾಣಿಕೆ ಮಾಡಲಾಗಲಿಲ್ಲ. ತೋಟದಲ್ಲೇ ಕೊಳೆತವು. ಮುಷ್ಕರವನ್ನು ಆಗ ವಾಪಸ್ಸು ತೆಗೆದುಕೊಳ್ಳುವ ಬಗ್ಗೆ ಹಿಂದಿದ್ದ ಸರ್ಕಾರ ಯಾವುದೇ ಪ್ರಯತ್ನಪಡಲಿಲ್ಲ. ಸಮಸ್ಯೆ ಬಗೆಹರಿಸಲಿಲ್ಲ. ಅದಕ್ಕೆ ನಾನು

ಪ್ರತಿಭಟನೆ ಮಾಡಿಸಿದ್ದುದು. ಆದರೆ ಇವತ್ತು ಶಿವರಾಮೇಗೌಡರು ಹೇಳಿರುವುದು., ಮಾರ್ಕೆಟ್ ಯಾರ ಕೈಯಲ್ಲೂ ಇಲ್ಲ. ನಾವು ಒಪ್ಪಿಕೊಂಡಿರುವ ಆರ್ಥಿಕ ವ್ಯವಸ್ಥೆ ಎಂದರೆ ಸಪ್ಲೈ ಅಂಡ್ ಡಿಮಾಂಡ್. ಮಾರ್ಕೆಟ್ ಎಕಾನಮಿಯನ್ನು ನಾವು ಒಪ್ಪಿಕೊಂಡಿದ್ದೇವೆ. ಇದರಲ್ಲಿ ಮೂಲವಾಗಿರುವುದು ಸಪ್ಲೈ ಅಂಡ್ ಡಿಮಾಂಡ್. ಉತ್ಪಾದನೆ ಜಾಸ್ತಿಯಾದಷ್ಟೂ ಲಾಭ ಜಾಸ್ತಿಯಾಗುತ್ತದೆ. ಆದರೆ, ವ್ಯವಸಾಯದಲ್ಲಿ ಹಾಗಾಗಬಾರದು. ಮಾರ್ಕೆಟ್ ಯಾರ ಕೈಯಲ್ಲೂ ಇಲ್ಲವೆನ್ನುವುದನ್ನು ಎಲ್ಲಾ ಸದಸ್ಯರೂ ಒಪ್ಪಿದ್ದಾರೆಂದು ನಾನು ಹೇಳುತ್ತೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಕೃಷಿ ಲಾಭದಾಯಕವಾಗಿದ್ದರೆ, ರೈತರು ಈ ದೇಶಕ್ಕೆ ಅನ್ನ ಕೊಡುವವರಾಗಿದ್ದು, ಸುಖಿಗಳಾಗಿರಬೇಕೆಂಬ ಭಾವನೆ ಇರುತ್ತದೆ. ಲಾಭದಾಯಕವಾಗಬೇಕಾಗಿದ್ದರೆ, ಉತ್ಪಾದನಾ ಖರ್ಚು ಕಡಿಮೆಯಾಗಬೇಕು. ಆದಾಗಬೇಕಾದರೆ ಕಳೆದ 50 ವರ್ಷಗಳಿಂದ ನಾವು ಕೃಷಿಯಲ್ಲಿ ಅಳವಡಿಸಿಕೊಂಡಿರುವ ವಿಧಾನಗಳ ಬಗ್ಗೆ ಯೋಚಿಸಬೇಕು. ಕಾಗೋಡು ತಿಮ್ಮಪ್ಪನವರೂ ಸಹ ರೈತ ಕುಟುಂಬದಿಂದ, ಸಮುದಾಯದಿಂದ ಬಂದವರಿದ್ದು, ಅವರಿಗೆ ಮತ ನೀಡುವವರೂ ಸಹ ರೈತರೇ ಎಂದು ನಾನು ತಿಳಿದುಕೊಂಡಿದ್ದೇನೆ. ನಾನೊಂದು ಹೇಳಬಯಸುತ್ತೇನೆ, ನಮ್ಮವರೇ ಆಗಿರುವ, ಅವರದೇ ಜಿಲ್ಲೆಯ ಚಿಕ್ಕೇಗೌಡರು ಆಗ ಕೃಷಿ ಸಚಿವರಾಗಿದ್ದರು. ನಾನು ಕೇಳುತ್ತೇನೆ, ರೈತರು ಉಪಯೋಗಿಸುವ ಉಪಕರಣಗಳನ್ನು ಇವತ್ತು ವೈಜ್ಞಾನಿಕವಾಗಿ ಕೊಡಬೇಕು. ಅದನ್ನು ಅವರಿಗೆ ಕೊಟ್ಟರೆ, ರೈತರು ಬೆಳೆಯುವ ಬೆಳೆಯಲ್ಲಿ ಖರ್ಚನ್ನು ಕಡಿಮೆ ಮಾಡಬಹುದು ಎಂಬ ಚಿಂತನೆ ಮಾಡುವುದಕ್ಕಾಗಿರಲಿಲ್ಲವೇ? ಉಪಕರಣಗಳನ್ನು ರಾಜ್ಯದ ರೈತರಿಗೆ ಕೊಟ್ಟು, 50 ಪರ್ಸೆಂಟ್ ಸಬ್ಸಿಡಿ ಕೊಟ್ಟ ಸರ್ಕಾರವೆಂದರೆ ಅದು ಪಟೇಲರ ಸರ್ಕಾರ ಮತ್ತು ಬೈರೇಗೌಡರೇ ಹೊರತು ನೀವಲ್ಲ ಎಂಬುದನ್ನು ನೀವೂ ಒಪ್ಪಿಕೊಳ್ಳಬೇಕಾಗುತ್ತದೆಂದು ನಾನು ಹೇಳುತ್ತೇನೆ. ನಮ್ಮ ಸಭಾನಾಯಕರು ಒಂದು ಮಾತು ಹೇಳುತ್ತಾ, ಈ ಸರ್ಕಾರ ಮಾಡುವ ಕೆಲಸವನ್ನು ಬರಿಗಣ್ಣಿನಿಂದ ನೋಡಿ, ಎಕ್ಸ್-ರೇ ಕಣ್ಣಿನಿಂದ ನೋಡಬೇಡಿ. ಬರಿಗಣ್ಣಿನಿಂದ ನೋಡಿದರೆ ಸುಂದರವಾಗಿ ಕಾಣುತ್ತದೆ, ಇಲ್ಲವಾದರೆ ಬರಿ ಎಲುಬುಗಳೇ ಕಾಣುತ್ತವೆಂದು ಹೇಳಿದರು. ನೀವು ಎಲ್ಲಿ ಕೊಟ್ಟಿದ್ದೀರೆಂದರೆ, ನಾನು ನನ್ನ ತಾಲ್ಲೂಕಿನ ರೈತರಿಗೆ 50 ಪರ್ಸೆಂಟ್ ದರದಲ್ಲಿ ಡ್ರಂಸೀಡರ್ಸ್ ಕೊಡಿಸಿದ್ದೇನೆ, ಕಳೆ ಕೀಳುವ ಸಾಧನಗಳನ್ನು ಬಾಳೆ ಹಾಕುವುದಕ್ಕೆ ಪರಂಗಿ ಹಾಕುವುದಕ್ಕೆ, ಗುಂಡಿ ತೆಗೆಯುವುದಕ್ಕೆ ಸಾಧನಗಳನ್ನು ಕೊಡಿಸಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಸುಂದರವಾದ ಹೆಣ್ಣನ್ನು ಬರಿ ಕಣ್ಣಿನಿಂದ ನೋಡಿದರೆ ಚೆನ್ನಾಗಿ ಕಾಣುತ್ತಾಳೆ, ಎಕ್ಸ್‌ರೇ ಕಣ್ಣಿನಿಂದ ನೋಡಿ ಬರೀ ಎಲುಬು ಕಾಣುತ್ತದೆ. ಎಂದು ಅವರು ಹೇಳಿದ್ದಾರೆ. ನೀವು ಅದನ್ನು ಹೇಳಲಿಲ್ಲ.

ಶ್ರೀ ಎಲ್.ಆರ್. :— ಶಿವರಾಮೇಗೌಡ ಎಕ್ಸರೇ ಕಣ್ಣಿನಿಂದ ನೋಡಬೇಡಿ ಬರೀ ಕಣ್ಣಿನಿಂದ ನೋಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಏನನ್ನು ನೋಡಬೇಕು.?

ಶ್ರೀ ಎಲ್.ಆರ್ ಶಿವರಾಮೇಗೌಡ :— ನಮ್ಮ ಸರ್ಕಾರ ಮಾಡಿರತಕ್ಕಂಥ ಸಾಧನೆಯನ್ನು ನೋಡಿ. ಎಕ್ಸರೇಯಿಂದ ನೋಡಿದರೆ ಇದು ಚೆನ್ನಾಗಿ ಕಾಣಿಸುವುದಿಲ್ಲ, ಆದ್ದರಿಂದ ಬರೀ ಕಣ್ಣಿನಿಂದ ನೋಡಿದರೆ ಚೆನ್ನಾಗಿ ಕಾಣುತ್ತದೆ ಆನಂದಪಡಬಹುದು ಎಂದು ನಾನು ಹೇಳುತ್ತಿದ್ದೇನೆ.

ಅಧ್ಯಕ್ಷರು :— ಯಾರ್ಯಾರಿಗೆ ಹೇಗೆ ಬೇಕೋ ಹಾಗೆ ನೋಡಿಕೊಳ್ಳಿ, ಅವರವರ ಅನುಕೂಲಕ್ಕೆ ತಕ್ಕಂಥ ನೋಡಿಕೊಳ್ಳಿ..

ಶ್ರೀ ಎಲ್.ಆರ್. ಶಿವರಾಮೇಗೌಡ :— ಇವತ್ತು ಹೋಸ ತಂತ್ರ ಜ್ಞಾನ, ಹೊಸ ತಳಿ, ಡ್ರಿಪ್ ಇರಿಗೇಷನ್ ಮುಂತಾದ ವೈಜ್ಞಾನಿಕ ಕ್ರಮಗಳಿಂದ ರೈತರು ಮುಂದೆ ಬರುವುದಕ್ಕೆ ಹೆಚ್ಚು ಒತ್ತನ್ನು ಕೊಟ್ಟವರು ನಮ್ಮ ಮಾನ್ಯ ಭೈರೇಗೌಡರ ಎನ್ನತಕ್ಕಂಥ ಮನಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಈ ನಿಟ್ಟಿನಲ್ಲಿ ಒಂದು ಉದಾರಣೆಯನ್ನು ಹೇಳುವುದಾದರೆ, ಒಂದು ಉದಾಹರಣೆಯನ್ನು ಹೇಳುವುದಾದರೆ, ಒಂದು ಎಕರೆಯಲ್ಲಿ ಭತ್ತ ನಾಟಿ ಮಾಡಬೇಕಾದರೆ ಸುಮಾರು 1200 ರೂಪಾಯಿಗಳಿಂದ 1500 ರೂಪಾಯಿಗಳವರೆಗೆ ಖರ್ಚು ಬರುತ್ತದೆ. ಡ್ರಮ್‌ಸೀಡರ್ ಎನ್ನತಕ್ಕಂಥ ಒಂದು ವೈಜ್ಞಾನಿಕ ಉಪಕರಣ ಇದೆ. ಇದು ಏನೂ ಬಹಳ ದುಬಾರಿ ಅಲ್ಲ, ಬಹಳ ಸುಲಭ ದರದಲ್ಲಿ ದೊರೆಯುತ್ತದೆ. ಇವತ್ತು ಆ ಯಂತ್ರದ ಬೆಲೆ ಕೇವಲ 1700 ರೂಪಾಯಿ ಇದೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಭತ್ತ ನಾಟಿ ಮಾಡಲು ಒಂದು ಎಕರೆಗೆ 1200 ರೂಪಾಯಿಗಳು ಬೇಕಾಗುವುದಿಲ್ಲ, ಸುಮಾರು 150 ರೂಪಾಯಿಗಳಾದರೂ ಸಾಕು. ಆದರೆ ವ್ಯೂಸ್ ಪವರ್ ಜಾಸ್ತಿ ಬೇಕಾಗುತ್ತದೆ. ಡ್ರಮ್‌ಸೀಡರ್ ಯಂತ್ರವನ್ನು ಇಬ್ಬರು ಉಪಯೋಗಿಸಿದರೆ ಒಂದು ದಿವಸದಲ್ಲಿ ಸುಮಾರು ಎರಡು ಎಕರೆಗೆ ಭತ್ತ ನಾಟಿ ಮಾಡಬಹುದು.

ಶ್ರೀ ಕಾಗೋಡು ತಿಮ್ಮಪ್ಪ :— ಭತ್ತ ನಾಟಿ ಮಾಡುವ ಕೃಷಿಕರು ನಮ್ಮಲ್ಲಿ ಸುಮಾರು 10 ರಿಂದ 15 ಲಕ್ಷ ರೈತರು ಇರಬಹುದು, ಇಂಥ ಯಂತ್ರವನ್ನು ಎಷ್ಟು ಜನರಿಗೆ ಹಂಚಿಕೆ ಮಾಡಿದ್ದೀರಿ? ಇದನ್ನು ತಾವು ಹೇಳಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ :— ನೀವು ಎಷ್ಟು ಯಂತ್ರಗಳನ್ನು ಕೇಳಿದರೂ ರಿಯಾಯಿತಿ ದರದಲ್ಲಿ ಕೊಡುತ್ತಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರೇ, ತಮಗೂ ದಯಮಾಡಿ ವಿನಂತಿ ಮಾಡಿಕೊಳ್ಳುತ್ತೇನೆ, ಶಿವಮೊಗ್ಗ ಭಾಗದ ಎಲ್ಲಾ ರೈತರಿಂದ ಕೃಷಿ ಇಲಾಖೆಗೆ ಅರ್ಜಿ ಕೊಡಿಸಿ, ಎಲ್ಲರಿಗೂ ಕೂಡ ನೀವು ಎಷ್ಟು ಕೇಳುತ್ತೀರ ಅಷ್ಟನ್ನು ಕೊಡಿಸುವವಂತಹ ಪ್ರಯತ್ನ ಮಾಡೋಣ...

ಶ್ರೀ ಕಾಗೋಡು ತಿಮ್ಮಪ್ಪ :— ಎಲ್ಲಿ ಮಾಡಿದ್ದೀರಿ?

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾಡಿದ್ದೇವೆ, ಪ್ರಯತ್ನ ಕೂಡ ಮಾಡಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಇಷ್ಟು ಪ್ರಯತ್ನ ಅವರು ಮಾಡಿದ್ದರೆ ಇಷ್ಟು ಹೊತ್ತಿಗೆ ಡಿಸಿಎಂ ಆದರೂ ಆಗುತ್ತಿದ್ದರು...

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ ಡ್ರಮ್‌ಸೀಡರ್ ಉಪಯೋಗ ಮಾಡುವುದರಿಂದ ಕಳೆ ಜಾಸ್ತಿ ಬರುತ್ತದೆ, ಈ ಕಳೆಯನ್ನು ತೆಗೆಯಲು ವೀಡರ್‌ನ್ನು ಉಪಯೋಗಿಸಿ ಕಳೆಯನ್ನು ತೆಗೆಯಬೇಕಾಗುತ್ತದೆ. ಕಳೆ ಔಷಧಿಯನ್ನು ಕಡ್ಡಾಯವಾಗಿ ಉಪಯೋಗ ಮಾಡಬೇಕಾಗುತ್ತದೆ. ಇಲ್ಲದಿದ್ದರೆ ಬಹಳ ಜಾಸ್ತಿ ಕಳೆ ಬರುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಒಂದು ಹೊಸ ಪ್ರಯತ್ನ ಮಾಡಬೇಕು ಎನ್ನುವ ದೃಷ್ಟಿಯಲ್ಲಿ ಒಂದು ಉದಾಹರಣೆಯನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ನಮ್ಮ ಕಡೆ ಜಾಸ್ತಿ ತೆಂಗಿನ ತೋಟಗಳನ್ನು ಹೊಂದಿರುತ್ತಾರೆ. ನಾವು ಎಲ್ಲರೂ ಅಂದರೆ ತೆಂಗಿನ ತೋಟವನ್ನು ಹೊಂದಿರುವವರೆಲ್ಲರೂ ಒಂದು ರೀತಿಯಲ್ಲಿ ಸೋಮಾರಿಗಳೇ, ಏಕೆಂದರೆ, ನಾವು ಯಾರೂ ಹೊರಗಡೆ ಹೋಗಿ ನೋಡುವುದಿಲ್ಲ. ಕೆ.ಆರ್. ಪೇಟೆಯಲ್ಲಿ ರಾಜ್ಯ ಪ್ರಶಸ್ತಿ, ರಾಷ್ಟ್ರಪ್ರಶಸ್ತಿ, ಪಡೆದಿರತಕ್ಕಂಥ ಒಬ್ಬ ಪುಟ್ಟೇಗೌಡ ಎನ್ನುವ ರೈತ ಸುಮಾರು 30 ಎಕರೆಯಲ್ಲಿ ತೆಂಗು ಹಾಕಿದ್ದಾನೆ, ಅದರಲ್ಲಿ ಕಾಫಿ ಹಾಕಿದ್ದಾನೆ, ಅದರಲ್ಲಿ ಪೆಪ್ಪರ್ ಹಾಕಿದ್ದಾನೆ, ಒಂದು ವರ್ಷಕ್ಕೆ ಎಲ್ಲಾ ಖರ್ಚನ್ನು ಕಳೆದು ಸುಮಾರು 30 ಲಕ್ಷ ರೂಪಾಯಿ ಲಾಭ ತೆಗೆದುಕೊಂಡಿದ್ದಾನೆ.

ಶ್ರೀ ಕೆ.ಎಸ್. ಪುಟ್ಟಣ್ಣಯ್ಯ :— ಪುಟ್ಟೇಗೌಡರಂತಹವರಿಗೆ ಎಲ್ಲಾ ರೈತರನ್ನು ಹೋಲಿಕೆ ಮಾಡಬೇಡಿ, ಏಕೆಂದರೆ, ಅವರಿಗೆ 10 ರಿಂದ 20 ಲಕ್ಷ ಬಂಡವಾಳ ಹಾಕುವ ಸಾಮರ್ಥ್ಯ ಇದೆ. ಸಾಮಾನ್ಯ ರೈತರಿಗೆ ಇನ್‌ವೆಸ್ಟ್ ಮಾಡತಕ್ಕಂಥ ಸಾಮರ್ಥ್ಯ ಎಲ್ಲಿದೆ?

ಶ್ರೀ ಎಲ್.ಆರ್. ಶಿವರಾಮೇಗೌಡ :— ನಾನು ಹೇಳತಕ್ಕಂಥದ್ದು ಏನೆಂದರೆ, ನಮ್ಮ ಕಡೆಗೆ ಸಾವಿರದಿಂದ ಎರಡುಸಾವಿರ ತೆಂಗಿನ ಮರಗಳನ್ನು ಇಟ್ಟುಕೊಂಡಿರುವವರು ಅವರಿಗೆ ಅದರಲ್ಲಿ ತೃಪ್ತಿ ಇದೆ. ಹೆಚ್ಚು ಬೆಳೆ ಬೆಳೆದರೆ ರೈತ ಪ್ರಗತಿಯಾಗುವುದಲ್ಲದೆ ಇಡೀ ದೇಶ ಪ್ರಗತಿಯಾಗುತ್ತದೆ. 30 ಎಕರೆ ಇರುವ ಒಬ್ಬ ರೈತ 1200 ತೆಂಗಿನ ಮರಗಳನ್ನು ಹಾಕುವ ಬದಲು ಅದರ ಮಧ್ಯದಲ್ಲಿ ಕಾಫಿಯನ್ನು ಬೆಳೆಯುವುದಕ್ಕೆ ಅವನಿಗೇನೂ ದುಡ್ಡಿಗೆ ತೊಂದರೆಯಾಗುವುದಿಲ್ಲ. ಬೆಲೆ ನೀತಿ ಒಂದು ಕಡೆ ಇರಲಿ, ಮೊದಲು ರೈತರು ಹೆಚ್ಚು ಹೆಚ್ಚು ಬೆಳೆಯುವುದು ಬೇಡವೆ? ಬೆಳೆದವರೆಲ್ಲರೂ ವಿಧಾನಸೌಧದ ಮುಂದೆ ಬಂದು ಹಾಕುವುದಿಲ್ಲ. ಇದಕ್ಕೊಂದು ನೀತಿ ಕೂಡ ಮಾಡಬೇಕಾಗುತ್ತದೆ. ಬೆಳೆಯುವುದನ್ನೇ ಕಡಿಮೆ ಮಾಡಬೇಕು ಎಂದು ಹೇಳುವುದಕ್ಕೆ ಆಗುತ್ತದೆಯೇ? ಇರುವ ಭೂಮಿಯಲ್ಲಿ, ಇರುವ ನೀರಿನಲ್ಲಿ ಹೆಚ್ಚು ಹೆಚ್ಚು ಬೆಳೆಯನ್ನು ಬೆಳೆಯುವುದಕ್ಕೆ ಅವಕಾಶ ಮಾಡಿಕೊಡಬೇಕು. ಹೊಸ ಹೊಸ ವಿಚಾರ ಹೊಸ ಹೊಸ ತಳಿಗಳನ್ನು ಅಳವಡಿಸಿಕೊಂಡು ಹೆಚ್ಚು ಉತ್ಪನ್ನ ಮಾಡಬೇಕು ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ಈ ರೀತಿಯ ಹೊಸ ತಳಿಗಳನ್ನು ಉಪಯೋಗ ಮಾಡಿದ ಮೇಲೆ ಮಂಡ್ಯದಲ್ಲೊಂದು ವಿ.ಸಿ. ಫಾರ್ಮ್ ಇದೆ ಮಾನ್ಯ ಪುಟ್ಟಣ್ಣಯ್ಯನವರಿಗೂ ಈ ವಿಚಾರ ಗೊತ್ತಿದೆ. ವಿ.ಸಿ. ಫಾರ್ಮ್‌ನಲ್ಲಿ ಈ ಒಂದು ಎಕ್ಸ್‌ಪರಿಮೆಂಟ್ ಮಾಡಿದ ಮೇಲೆ ಒಂದು ಎಕರೆಗೆ ಎಂಟು ಕ್ವಿಂಟಾಲ್ ಬತ್ತ ಜಾಸ್ತಿ ಬೆಳೆದಿದ್ದಾರೆ. ನಾನು ಎಂಟು ಕ್ವಿಂಟಾಲ್ ಎಂದು ತಿಳಿದುಕೊಂಡಿದ್ದೇನೆ ಅದು ಐದು ಎಂದು ಮಾನ್ಯ ಪುಟ್ಟಣ್ಣಯ್ಯನವರು ಹೇಳುತ್ತಾರೆ.

ಅಧ್ಯಕ್ಷರು :— ಪರವಾಗಿಲ್ಲ ಹೇಳಿ. ಮೂರು ಹೆಚ್ಚಿಗೆ ಇದ್ದರೆ ನಾವು ಅಡ್ಜೆಸ್ಟ್ ಮಾಡಿಕೊಳ್ಳೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನೀವು ಈ ರೀತಿ ಹೇಳಿದರೆ ನಾನು ಹೇಳುವುದಕ್ಕೆ ಹೋಗುವುದಿಲ್ಲ.

ಅಧ್ಯಕ್ಷರು :— ನಾನೇನು ಮಾಡಲಿ, ನೀವು 8 ಎಂದು ಹೇಳುತ್ತೀರಿ, ಅವರು ಐದು ಎಂದು ಹೇಳುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನನಗೆ ಬಂದಿರುವ ಮಾಹಿತಿ ಪ್ರಕಾರ 8, ಮಾನ್ಯ ಪುಟ್ಟಣ್ಣಯ್ಯನವರಾದರೆ, ಅವರ ಬಹಳ ಲೆಕ್ಕಾಚಾರವಾಗಿ ಯಾರ್ಡ್‌ಸ್ಟಿಕ್ ಇಟ್ಟುಕೊಂಡು ಐದು ಎಂದು ಹೇಳುತ್ತಾರೆ. ನಾನು ಈ ಮಾತನ್ನು ಏಕೆ ಹೇಳುತ್ತೇನೆಂದರೆ, ರೈತರು ಇರುವ ಭೂಮಿಯಲ್ಲಿ, ದೊರಕುವ ನೀರಿನಲ್ಲಿ ಹೆಚ್ಚು ಹೆಚ್ಚು ಉತ್ಪನ್ನ ಬೆಳೆಯುವುದಕ್ಕೆ ನಮ್ಮ ಸರ್ಕಾರ ಸಾಕಷ್ಟು ಬೆಂಬಲ ನೀಡಿದೆ ಎನ್ನುತಕ್ಕಂಥ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತೇನೆ. ಇದರ ಜೊತೆಗೆ ಮತ್ತೊಂದು ವಿಚಾರವನ್ನು ನಾನು

ಹೇಳಬಯಸುತ್ತೇನೆ. ನಾನು ಕೂಡ ಈ ಸದನಕ್ಕೆ ಬಂದ ಮೇಲೆ 5-6 ಜನ ವ್ಯವಸಾಯ ಮಂತ್ರಿಗಳನ್ನು ನೋಡಿದ್ದೇನೆ. ವ್ಯವಸಾಯ ಇಲಾಖೆಯಲ್ಲಿ ಎಷ್ಟು ಭ್ರಷ್ಟಾಚಾರ ತುಂಬಿತ್ತು ಎಂದರೆ ಅದನ್ನು ಹೇಳತೀರದು. ಸಾಯಿಲ್ ಕನ್‌ಸರ್‌ವೇಷನ್ ಆಫೀಸಗೆ ಇವತ್ತು ಒಬ್ಬ ಆಫೀಸರ್ ಹೋಗಬೇಕಾದರೆ ಸುಮಾರು ಮೂರು ಲಕ್ಷ ರೂಪಾಯಿಗಳನ್ನು ಲಂಚಕೊಟ್ಟು ಹೋಗತಕ್ಕಂಥದ್ದನ್ನು ನಾವು ಕಣ್ಣಾರೆ ನೋಡಿದ್ದೇನೆ. ಆದರೆ, ಇವತ್ತಿನ ಪರಿಸ್ಥಿತಿಯಲ್ಲಿ ಇಂಥ ಇಲಾಖೆಯಲ್ಲಿ ಇದು ಯಾವುದೂ ಕೂಡ ನಡೆಯುತ್ತಿಲ್ಲ. ಕಾರಣ, ಮಾನ್ಯ ಸಚಿವರು ಈ ರೀತಿ ಮಾಡಬಾರದು, ಇದು ತಪ್ಪಾಗುತ್ತದೆಂದು ಮನದಟ್ಟು ಮಾಡಿ, ಈ ನಿಟ್ಟಿನಲ್ಲಿ ಸುಮಾರು 300 ಮೊಕದ್ದಮೆಗಳನ್ನು, ಯಾರ್‍ಯಾರು ತಪ್ಪು ಮಾಡಿದ್ದಾರೆ, ಯಾರ್‍ಯಾರು ಭ್ರಷ್ಟ ಅಧಿಕಾರಿಗಳು ಇದ್ದಾರೆ ಅವರ ಮೇಲೆ ಹಾಕಿ ಅವರನ್ನೆಲ್ಲಾ ಹೊರದೆ ಎಳೆಯತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಮೊದಲು ಇಲಾಖಾ ವಿಚಾರಣೆ ಎಂದು ಇತ್ತು ಇದನ್ನು ತೆಗೆದು ಈ ಒಂದು ಇಲಾಖೆಯಲ್ಲಿ ನಿವೃತ್ತ ನ್ಯಾಯಾಧೀಶರಿಂದ ವಿಚಾರಣೆ ಮಾಡತಕ್ಕಂಥ ಕೆಲಸವನ್ನು ಈ ಸರ್ಕಾರ ಮಾಡಿದೆ ಎಂದು ಹೇಳಿದರೆ ಅತಿಶಯೋಕ್ತಿಯೇನಲ್ಲ ಎನ್ನತಕ್ಕಂಥ ಮಾತನ್ನು ನಾನು ಇಲ್ಲಿ ಹೇಳಬಯಸುತ್ತೇನೆ. ರೈತರನ್ನು ಒಂದೇಸಾರಿ ಅಭಿವೃದ್ಧಿ ಮಾಡುವುದಕ್ಕೆ ಆಗುವುದಿಲ್ಲ, ರೈತರಿಗೆ ಹೆಚ್ಚು ಹೆಚ್ಚು ಉತ್ತೇಜನವನ್ನು ಕೊಟ್ಟು, ನಮ್ಮ ದೇಶದ ಬೆನ್ನೆಲುಬಾದ ರೈತರನ್ನು ಮೇಲಕ್ಕೆ ಎತ್ತುವಂತಹ ಕಾರ್ಯ ಹಂತಹಂತವಾಗಿ ನಡೆಯುತ್ತಿದೆ ಎಂದು ನಾನು ಹೇಳಬಯಸುತ್ತೇನೆ. ವ್ಯವಸಾಯ ಇಲಾಖೆ ಹಾಗೂ ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟಂತೆ ಹೊಸ ಚಿಂತನೆ ಮಾಡತಕ್ಕಂಥ ಅವಕಾಶ ಇಂದು ದೊರಕಿದೆ. ಇನ್ನು ನೀರಾವರಿ ಇಲಾಖೆಯ ಬಗ್ಗೆ ಹೇಳುವುದಾದರೆ ನಾನು ಪ್ರಥಮವಾಗಿ ಕಾವೇರಿ ಕಣಿವೆಯ ಬಗ್ಗೆ ನಾಲ್ಕು ಮಾತನಾಡಲು ಇಷ್ಟಪಡುತ್ತೇನೆ. ಇವತ್ತು ಯಾರು ಮಾಡಿರತಕ್ಕಂಥ ಕೆಲಸವನ್ನು ಮಾನ್ಯ ಪ್ರಧಾನಮಂತ್ರಿಗಳಾದ ಅಟಲ್ ಬಿಹಾರಿ ವಾಜಪೇಯಿ ಅವರು ಅಧಿಕಾರಕ್ಕೆ ಬಂದ ತಕ್ಷಣ ಈ ಕಾವೇರಿ ಪ್ರಾಧಿಕಾರವನ್ನು ರಚನೆ ಮಾಡಿರುವುದರಿಂದ, ಕಾವೇರಿ ಕಣಿವೆಯಲ್ಲಿ ನೆನಗುದಿಗೆ ಬಿದ್ದಿದ್ದ ಈ ಸಮಸ್ಯೆಗೆ ಪ್ರಾಧಿಕಾರ ರಚನೆಯಾದ ಮೇಲೆ ಇವತ್ತು ಮನೆಯನ್ನು ಸೇರಿಕೊಂಡರು. ಮಾನ್ಯ ಖರ್ಗೆ ಅವರಿಗೆ ಗೊತ್ತಿರುವಂತೆ ಹಿಂದೆ ಇದೇ ಕಾವೇರಿ ವಿಷಯವಾಗಿ ನಮಗೂ ತಮಿಳುನಾಡಿನವರಿಗೆ ಗಲಾಟೆಯಾದ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಸುಮಾರು ಕೋಟ್ಯಾಂತರ ರೂಪಾಯಿ ಲಾಸ್ ಆಯಿತು, ಅನೇಕ ಸಾವು-ನೋವುಗಳು ಗಲಭೆಯಲ್ಲಿ ಉಂಟಾಯಿತು. ಈ ಎಲ್ಲಾ ಗಲಭೆಗೆ ಮೂಲ ಕಾರಣವೇ ಈ ಕಾವೇರಿ. ಇಂಥ ಪರಿಸ್ಥಿತಿಯಲ್ಲಿ ಪಂಚಾಯಿತಿ ಮೂಲಕ ನಿಮ್ಮ ವಿವಾದವನ್ನು ಬಗೆಹರಿಸಿಕೊಳ್ಳಿ ಎಂದು ಕೇಂದ್ರ ಸರ್ಕಾರದಲ್ಲಿರುವ ಬಿಜೆಪಿಯವರು ಮಾಡಿರತಕ್ಕಂಥ ಒಂದು ಒಳ್ಳೆಯ ಕೆಲಸ ಅಂದರೆ ಇದೊಂದೇ ಎಂದು ನಾನಾದರೂ ಇಲ್ಲಿ ಹೇಳಬಯಸುತ್ತೇನೆ. ಈ ನಿಟ್ಟಿನಲ್ಲಿ ನಾವು ನಿಮ್ಮ ಸರ್ಕಾರಕ್ಕೆ ಅಭಿನಂದನೆಯನ್ನು ಸಲ್ಲಿಸಬೇಕಾಗಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ಶಿವರಾಮೇಗೌಡರೇ, ನಮಗೆಲ್ಲಾ ನಿರ್ಣಯ ಪಾಸ್ ಮಾಡಿಕೊಟ್ಟರು. ಏನೆಂದರೆ, ಸುಗ್ರೀವಾಜ್ಞೆಗೆ ತಕ್ಕಂತೆ ಹೋಗಬೇಕು, ಮಧ್ಯಂತರ ಆದೇಶದಲ್ಲಿ ಏನಾಗಿದೆ ಅದೇರೀತಿಯಲ್ಲಿ ನಡೆದುಕೊಳ್ಳಬೇಕು, 205 ಟಿಎಂಸಿ ನೀರು ಬಿಡಬಾರದು ಎಂದು ಸರ್ವಾನುಮತದಿಂದ ನಿರ್ಣಯ ಪಾಸ್ ಮಾಡಿಸಿ ಅದಕ್ಕೆ ಸ್ಟಿಕ್‌ಆನ್ ಆಗಿದ್ದೇವೆಂದು ನಮಗೆ ಹೇಳಿ. ನೀವು ಅವರ ಜೊತೆಯಲ್ಲಿ ಸರೆಂಡರ್‌ಆಗಿ ಇವತ್ತು ನಾವೇನು ಒಂದು ದೊಡ್ಡ ಗುರಿಯನ್ನು ಸಾಧಿಸಿದ್ದೇವೆಂದು ಹೊರಟಿದ್ದೀರಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಖರ್ಗೆ ಸಾಹೇಬರಿಗೆ ಇಲ್ಲೊಂದು ಮಾತನ್ನು ಹೇಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಇಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು, ಅಲ್ಲಿಯೂ ಕೂಡ ಕಾಂಗ್ರೆಸ್ ಸರ್ಕಾರ ಇತ್ತು. ಇಲ್ಲಿ ಜನತಾದಳದ ಸರ್ಕಾರ ಇತ್ತು, ಅಲ್ಲಿಯೂ ಜನತಾದಳದ ಪ್ರಧಾನ ಮಂತ್ರಿಗಳಿದ್ದರು. ಇವರ್‍ಯಾರೂ ಮಾಡಿರತಕ್ಕಂಥ ಕೆಲಸವನ್ನು ಒಬ್ಬ ಪ್ರಧಾನ ಮಂತ್ರಿಗಳು ಮಾಡಿದ್ದಾರೆಂದರೆ ನೀವು ಭೇಷ್ ಎನ್ನಬೇಕೇ ಬೇಡವೇ? ಇದಕ್ಕೆ ಪೂರ್ವಕವಾಗಿ ಸನ್ಮಾನ್ಯ ಮುಖ್ಯಮಂತ್ರಿಗಳು ಕಾರಣರು ಎನ್ನತಕ್ಕಂಥದ್ದನ್ನು ತಾವು ಎಲ್ಲರೂ ಒಪ್ಪಿಕೊಳ್ಳಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

6.10 ಪಿ.ಎಂ

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಮಾನ್ಯ ನಾಗೇಗೌಡರು ಏನು ಹೇಳಿದರು, ನಾವೂ ಕೂಡ ಶ್ರೀ ವಿ.ಸಿ. ಶುಕ್ಲಾರವರು ಬಂದಾಗ ಅದನ್ನೇ ಹೇಳಿದೆವು. ಇದು ಅನ್ಯಾಯವಾಗುತ್ತದೆ, ಇದು ಹಾಳಾಗುತ್ತದೆ ಎಂದು ಹೇಳಿದ ಮೇಲೆ, ರಾತ್ರಿ ಎರಡು ಗಂಟೆಗೆ ಬಂದು ನಮ್ಮ ತಲೆ ತಿಂದು, ಮಾನ್ಯ ವೀರಪ್ಪ ಮೊಯಿಲಿಯವರ ತಲೆಯನ್ನು ಕೆಡಿಸಿ ಎಲ್ಲಾ ಮಾಡಿದಂಥ ಮನುಷ್ಯರು ಇವತ್ತು ಅವರೇ ಹೇಳುತ್ತಾರೆ ಮಾಡಿರುವುದು ಚೆನ್ನಾಗಿ ಇದೆ ಎಂದು ಎಂತಹ ಗತಿ ನಮಗೆ ಬಂದಿದೆ.

ಶ್ರೀ ವಾಟಾಳ್ ನಾಗರಾಜ್ :— ಯಾರು ಯಾವಾಗ ಏನೇನು ಹೇಳಿದ್ದಾರೆ ಎಂಬುದರ ಬಗ್ಗೆ ಪುಸ್ತಕ ರೂಪದಲ್ಲಿ ಮುದ್ರಣವಾಗಬೇಕು.

ಶ್ರೀ ಎಲ್.ಆರ್. ಶಿವರಾಮೇಗೌಡ :— ನಾನು ತಮ್ಮಲ್ಲಿ ವಿನಂತಿ ಮಾಡುತ್ತೇನೆ. ಈ ಕಾವೇರಿ ಕಣಿವೆಯ ರೈತರಿಗೆ ಪ್ರಾಧಿಕಾರದಿಂದ ಒಳ್ಳೆಯದಾಯಿತಾ ಅಥವಾ ಇಲ್ಲವೆ? ನಾನು ಒಬ್ಬ ರೈತನಾಗಿ ಹೇಳುತ್ತೇನೆ. ಆಗ ಎಲ್ಲಿ ಪ್ರಾಧಿಕಾರ ಮಾಡಿದರು?

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನೀವೆಲ್ಲಾ ಆಗ ಏಕೆ ಅವಾಂತರವನ್ನು ಮಾಡಿದಿರಿ. ನಾವು ನೀವು ಆಗ ಎಲ್ಲಾ ಅಲ್ಲೇ ಇದ್ದೇವಲ್ಲಾ?

ಶ್ರೀ ವಾಟಾಳ್ ನಾಗರಾಜ್:— ಕಾವೇರಿ ಪ್ರಾಧಿಕಾರ ಕನ್ನಡಿಗರ ಮರಣ ಶಾಸನ ಎಂದು ಹೇಳಿದ್ದೇನೆ, ಇವರಿಗೆ ಏನೇನೂ ಗೊತ್ತೇ ಇಲ್ಲ. ಏನೇನೊ ಮಾತನಾಡುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನೀವು ಯಾವಾಗ ಏನೇನು ಹೇಳಿದ್ದೀರಿ ಎಂಬುದು ನನಗೆ ಗೊತ್ತಿಲ್ಲ.

ಶ್ರೀ ವಾಟಾಳ್ ನಾಗರಾಜ್:— ಕಾವೇರಿ ವಿಚಾರದಲ್ಲಿ ಬದಲಾವಣೆಯಾಗಿರತಕ್ಕಂಥದ್ದನ್ನು ನನ್ನ ನಿಲುವಿನಲ್ಲಿ ನೀವು ತೋರಿಸಿದರೆ ಆ ಕ್ಷಣದಲ್ಲಿಯೇ ನಾನು ರಾಜೀನಾಮೆಯನ್ನು ಕೊಡುತ್ತೇನೆ.

ಶ್ರೀ ಕೆ.ಎನ್. ನಾಗೇಗೌಡ (ಭಾರಿ ನೀರಾವರಿ ಸಚಿವರು) :— ಮಾನ್ಯ ಅಧ್ಯಕ್ಷರೆ, ತಾವು ಅಪ್ಪಣೆ ಕೊಟ್ಟರೆ, ಒಂದು ರೆಕಾರ್ಡ್ ಆಗಿರುವುದನ್ನು ಹೇಳಲು ಇಷ್ಟಪಡುತ್ತೇನೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದರು ಮತ್ತು ಮಾನ್ಯ ವೀರಪ್ಪ ಮೊಯಿಲಿಯವರು ಇಲ್ಲಿ ಇದ್ದಾರೆ, ಮೊಯಿಲಿಯವರ ಹತ್ತಿರ ನಾಗೇಗೌಡರು ಪದೇ ಪದೇ ಹೀಗೆ ಆಗಬೇಕು ಹಾಗೆ ಆಗಬೇಕು ಎಂದು ತಲೆ ಕೆಡಿಸಿ ಆಗ ಒಪ್ಪಿಕೊಳ್ಳದೇ ಇರಲು ಮಾಡಿದವರು ಅವರೇ ಎನ್ನತಕ್ಕಂಥ ಮಾತನ್ನು ಅವರು ಹೇಳಿದರು. ಮಾನಿಟರಿಂಗ್ ಕಮಿಟಿ ಬಗ್ಗೆ ಆದಕ್ಕೆ ಶ್ರೀ ವಿ.ಸಿ. ಶುಕ್ಲಾರವರು ಬಂದಿದ್ದರು. ಅವರ ಪಕ್ಷದ ನಾಯಕರು ಆವತ್ತು ಈ ಇಲಾಖೆಯ ಜವಾಬ್ದಾರಿಯನ್ನು ಹೊತ್ತುಕೊಂಡಿದ್ದರು. ಅವರು ಶ್ರೀ ಶುಕ್ಲಾರವರ ಹತ್ತಿರ ಏನು ಮಾತನಾಡಿದರು ಎಂದು ಈ ಸದನದಲ್ಲಿ ಹೇಳಿದರೆ ಅದು ತುಂಬಾ ತಪ್ಪಾಗುತ್ತದೆ. ಕಾರಣ, ಅದನ್ನು ಹೇಳಬಾರದು. ಮೊಯ್ಲಿಯವರಿಗೂ ಗೊತ್ತು ನನಗೂ ಗೊತ್ತು. ನಾನು ಕಾಂಗ್ರೆಸ್ ಪಕ್ಷವನ್ನು ಬಿಟ್ಟು ಬರಬೇಕಾದರೆ ಮೂಲಭೂತ ಕಾರಣ ಶ್ರೀ ವಿ.ಸಿ. ಶುಕ್ಲಾರವರು. ಮಾನಿಟರಿಂಗ್ ಕಮಿಟಿ ಮಾಡಿ ಶ್ರೀ ಮೊಯ್ಲಿಯವರ ಮೇಲೆ ಆರೋಪವನ್ನು ಮಾಡಿ ಮಾನಿಟರಿಂಗ್ ಕಮಿಟಿಯನ್ನು ಒಪ್ಪಿಕೊಂಡಿದ್ದೇವೆಂದು ಮದ್ರಾಸಿನಲ್ಲಿ ಶ್ರೀಮತಿ ಜಯಲಲಿತಾರವರು ಉಪವಾಸ ಕುಳಿತುಕೊಂಡಾಗ ಅವರು ಹೇಳಿದಾಗ ನಾವು ಹೇಳಿದೆವು ಶ್ರೀ ಮೊಯಿಲಿಯವರು ಒಪ್ಪಿಲ್ಲ ಎಂದು. ಮಾನ್ಯ ಖರ್ಗೆಯವರೇ, ನೀವು ಆವಾಗ ಅಲ್ಲಿದ್ದಿರಿ. It is a fact. Even Mr. Moily is here. ಆಗ ನಾವು 7 ಜನ ಸಚಿವರು ಏನು ಹೇಳಿದೆವು ನನ್ನ ಕಛೇರಿಯಲ್ಲಿಯೇ ಪತ್ರಿಕಾ ವರದಿಯನ್ನು ಕರೆದು, ನಮ್ಮ ಮುಖ್ಯಮಂತ್ರಿಗಳು ಮಾನಿಟರಿಂಗ್ ಕಮಿಟಿಗೆ ಒಪ್ಪಿಲ್ಲ ಶ್ರೀ ಶುಕ್ಲಾರವರು ಹೇಳಿರತಕ್ಕದ್ದು ಸರಿಯಾದುದು ಅಲ್ಲ. ಮಾನಿಟರಿಂಗ್ ಕಮಿಟಿಗೆ ಅವರು ಎಂದೂ ಒಪ್ಪಿಲ್ಲ ಎನ್ನತಕ್ಕಂಥ ಹೇಳಿಕೆಯನ್ನು ಕೊಟ್ಟಿದ್ದರಿಂದ, ಕೇಂದ್ರ ಸರ್ಕಾರದಲ್ಲಿರತಕ್ಕಂಥ ಮಂತ್ರಿಯ ಮೇಲೆ ಒಂದೇ ಸರ್ಕಾರದಲ್ಲಿರತಕ್ಕಂಥ ರಾಜ್ಯಸರ್ಕಾರದ ಮಂತ್ರಿ ಹೇಳಿಕೆ ಕೊಟ್ಟು ಪಕ್ಷವನ್ನು ಅಶಿಸ್ತು ಮಾಡಿದರು ಎಂದು

ಯಾರು ನಿಮ್ಮ ಪಕ್ಷದಲ್ಲಿ, ಇವತ್ತು ನಾಯಕರು. I don't want to mention his name. ಬಂದಾಗ ಹೇಳುತ್ತೇನೆ. ಮಂಡ್ಯದಲ್ಲಿ ನೀವು ಭಾಷಣವನ್ನು ಮಾಡಲು ಹೋಗಿದ್ದೀರಲ್ಲಾ ಮಂಡ್ಯದಲ್ಲಿಯೇ ಭಾಷಣವನ್ನು ಮಾಡೋಣ. ಕಾವೇರಿ ಪ್ರಾಧಿಕಾರವನ್ನು ಮಾಡುವುದಕ್ಕೆ ಏನು ಪ್ರಯೋಜನವಾಗಿದೆ, ಕಾವೇರಿ ಪ್ರಾಧಿಕಾರದಿಂದ ಯಾರು ಯಾರು ರಾಜಕೀಯವನ್ನು ಮಾಡಿದರು, ಈ ಮಾನಿಟರಿಂಗ್ ಕಮಿಟಿಯ ಜವಾಬ್ದಾರಿಯನ್ನು ಪಕ್ಷದ ವತಿಯಿಂದ ಅವರೇ ವಹಿಸಿದ್ದರಲ್ಲಾ, ಅವರೇ ಏನು ಹೇಳಿದರು, ಶುಕ್ಲಾರವರ ಹತ್ತಿರ ಎಂಬುದನ್ನು ಕೇಳಿ ಹಾರ್ನಹಳ್ಳಿ ರಾಮಸ್ವಾಮಿಯವರು ಇದ್ದಾರೆ, ಅವರನ್ನು ಕೇಳಿ ಶ್ರೀ ವಿ.ಸಿ. ಶುಕ್ಲಾರವರು ನನ್ನ ಮೇಲೆ ಏನೇನು ಹಾರಾಡಿದರು ಎಂಬುದನ್ನು ಅವರಿಂದ ಕೇಳಿ ತಿಳಿದುಕೊಳ್ಳಿ ಅವರು ನಿಮ್ಮ ಪಕ್ಷದಲ್ಲಿಯೇ ಇದ್ದಾರೆ. ನಾವು ಎಂದೂ ಕೂಡ ಎರಡು ವಾದ ಇಲ್ಲ. ಅವರು ಮಾನಿಟರಿಂಗ್ ಕಮಿಟಿಯನ್ನು ಆಫೀಸರ್ಸ್ ಹಡ್ಡಿಂಗ್, ಇವತ್ತು ಪ್ರಾಧಿಕಾರ ಒಂದು ಪೊಲಿಟಿಕಲ್ ಬಾಡಿ ನಾನು ಇದನ್ನು ಅವತ್ತಿನಿಂದ ಹೇಳುತ್ತಿದ್ದೇನೆ. ಈ ಪ್ರಾಧಿಕಾರಕ್ಕೆ ಪ್ರಧಾನಮಂತ್ರಿಗಳು ಅಧ್ಯಕ್ಷರು. ಶ್ರೀ ನರಸಿಂಹರಾಯರು ಅಧ್ಯಕ್ಷರಾಗುತ್ತೇವೆಂದು ಅಂದಿದ್ದರೆ, ನಾವೂ ಕೂಡ ಮೊಯಿಲಿಯವರಿಗೆ ಒಪ್ಪಿಕೊಳ್ಳಿ ಎಂದು ಹೇಳುತ್ತಿದ್ದೆವು. ನೀವು ಮುಖ್ಯಮಂತ್ರಿಯಾಗಿ ಸದಸ್ಯರಾಗಿ ಇರುತ್ತೀರಿ ಪ್ರಧಾನ ಮಂತ್ರಿಗಳಾದ ಶ್ರೀ ನರಸಿಂಹರಾಯರು ಅಧ್ಯಕ್ಷರಾಗಿದ್ದಾರೆ ಒಂದು ಪೊಲಿಟಿಕಲ್ ಇನ್‌ಸ್ಟಿಟ್ಯೂಷನ್ ಒಪ್ಪಿಕೊಳ್ಳಿ ಎಂದು ಹೇಳುತ್ತಿದ್ದೆವು, ಆದರೆ ಅವತ್ತು ಆ ಮಾತು ಬರಲಿಲ್ಲ. ಪ್ರಧಾನ ಮಂತ್ರಿಗಳು ಮಾನಿಟರಿಂಗ್ ಕಮಿಟಿಯ ಅಧ್ಯಕ್ಷರಾಗಬೇಕೆಂದು ಮಾತು ಬಂದಿದ್ದರೆ ಶ್ರೀ ಮೊಯಿಲಿಯವರು ನಮ್ಮೆಲ್ಲರಿಗಿಂತ ಜಾಣ್ಮೆಯವರು ಅವರಿಗೆ ತಿಳುವಳಿಕೆ ಇತ್ತು, ಅವರು ಒಪ್ಪಿಕೊಳ್ಳುತ್ತಿದ್ದರು. ಮೊಯಿಲಿಯವರು ಒಪ್ಪಿಕೊಳ್ಳಬಾರದೆಂದು ಅವತ್ತು ಆ ಇಲಾಖೆಯ ವತಿಯಿಂದ ಉಪಮುಖ್ಯಮಂತ್ರಿಗಳು ಮೊಯಿಲಿಯವರ ಮೇಲೆ ಹೇಳಿದರು. ಅದನ್ನು ಹೇಳುವುದು ಬೇಡ. ಒಳ್ಳೆಯ ಕೆಲಸ ಆಗಿದೆ. ಅದಕ್ಕಾಗಿ ಒಳ್ಳೆಯ ಕೆಲಸವಾಗಿದೆ. ಎಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಮ್ಮ ಪಾರ್ಟಿಯನ್ನು ಇದಕ್ಕೋಸ್ಕರ ನೀವು ಬಿಟ್ಟಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ ಮಂಡ್ಯ ಸಿಲ್ವರ್ ಜುಬಿಲಿ ಪಾರ್ಕಿನಲ್ಲಿ ಯಾರ್‍ಯಾರು ಏನೇನೋ ಭಾಷಣವನ್ನು ಮಾಡಿದರು. ಕಾವೇರಿ ಪ್ರಾಧಿಕಾರದ ಬಗ್ಗೆ ಹಾಗೂ ಕಾವೇರಿ ಮೊದಲಿನಿಂದ ನಡೆದುಕೊಂಡು ಬಂದ ಬಗ್ಗೆ ಏನೆಲ್ಲಾ ಚರ್ಚೆ ನಡೆಯಿತು, ಇಲ್ಲಿ ನಡೆಯುತಕ್ಕಂಥ ಅಧಿವೇಶನದ ರೀತಿಯಲ್ಲಿಯೇ ಒಂದು ಸಣ್ಣ ಅಧಿವೇಶನವನ್ನು ಈ ಸರ್ಕಾರದ ವಿರುದ್ಧ ಅಲ್ಲಿ ಮಾಡಿದರು. ಏತಕ್ಕೆ ಮಾಡಿದರು ಕಾವೇರಿಯಿಂದ ರಾಜಕೀಯ ಮಾಡಲಿಕ್ಕೆ ಮಾಡಿದರು. ಕಾವೇರಿ ಮೇಲೆ ನನ್ನ ಆಣೆ, ಕಾವೇರಿಯ ಅಮ್ಮನ ಮೇಲೆ ಆಣೆ ಎಂದು ಪ್ರಮಾಣ ಮಾಡಿ ಹೇಳಿದರು. ಅವರಿಗೆ

ಯಾರಿಗೂ ಮಾಡಲಿಕ್ಕಾಗಲಿಲ್ಲ. ಮಾಡಿದರು ಮಾನ್ಯ ಮುಖ್ಯಮಂತ್ರಿಗಳ ಮುತ್ಸದ್ದಿತನ ಇವತ್ತು ಮಾನ್ಯ ಕರುಣಾನಿಧಿಯರನ್ನು ಯಾರಿಗೂ ಅಲ್ಲಾಡಿಸುವುದಕ್ಕೆ ಆಗಿರಲಿಲ್ಲ. ಮಾನ್ಯ ಜಯಲಲಿತಾರವರನ್ನು ಅಲುಗಾಡಿಸಲಿಕ್ಕೆ ಆಗಿರಲಿಲ್ಲ. ಯಾರಾದರೂ ಅಲ್ಲಾಡಿಸಿದ್ದರೆ ದಯಮಾಡಿ ಹೇಳಬೇಕು. ದಯಮಾಡಿ ತಾವು ಹೇಳಬೇಕು.

ಶ್ರೀ ವಾಟಾಳ್ ನಾಗರಾಜ್ :— ಮಾನ್ಯ ಕರುಣಾನಿಧಿಯವರನ್ನು ಅಲ್ಲಾಡಿಸಿದ ಕೀರ್ತಿ ಇವರಿಗೆ ಬರಲಿ, ನಮಗೆ ಏನೂ ಬರುವುದು ಬೇಡ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಜಯಲಲಿತಾರವರು ಇವರಿಗೆ ಇಂಟರ್‌ವ್ಯೂ ಕೊಡಲಿಲ್ಲ. ಇದನ್ನು ಜ್ಞಾಪಕ ಇಟ್ಟುಕೊಳ್ಳಬೇಕು. ಅವರು ಅಷ್ಟು ಉದ್ಧಟತನದಿಂದ ಹೇಳಿದರು. ಇದನ್ನೆಲ್ಲವನ್ನೂ ಬದಿಗೊತ್ತಿ ಅವರ ಮನಸ್ಸನ್ನು ಒಲಿಸಿ ಮಾನ್ಯ ಕರುಣಾನಿಧಿಯವರನ್ನು ಈ ವಿಚಾರದಲ್ಲಿ ಒಪ್ಪಿಕೊಳ್ಳುವಂತೆ ಮಾಡಿದ ಕೀರ್ತಿ ಶ್ರೀ ಜೆ.ಹೆಚ್. ಪಟೇಲರಿಗೆ ಬೇರೆ ಯಾರಿಗೂ ಅಲ್ಲ ಎನ್ನುವ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ನಮ್ಮ ಸರ್ಕಾರ ಕೇಂದ್ರದಲ್ಲಿ ಇಲ್ಲ. ಇವತ್ತು ಕರ್ನಾಟಕದಲ್ಲಿ ಜನತಾದಳ ಸರ್ಕಾರ, ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರ. ಕೇಂದ್ರದಲ್ಲಿ ಜನತಾದಳ ಸರ್ಕಾರ, ಕರ್ನಾಟಕದಲ್ಲಿ ಕಾಂಗ್ರೆಸ್ ಸರ್ಕಾರ ಇತ್ತು, ಕೇಂದ್ರದಲ್ಲಿ ಕೂಡ ಕಾಂಗ್ರೆಸ್ ಸರ್ಕಾರ ಇದ್ದರೂ ಮಾಡುವುದಕ್ಕಾಗಲಿಲ್ಲ. ಇಷ್ಟೆಲ್ಲಾ ತೊಂದರೆಗಳ ಮಧ್ಯೆ ಕಾವೇರಿ ಕಣಿವೆಯವರಿಗೆ ಇವತ್ತು ನೆಮ್ಮದಿಯಿಂದ ಇರುವಂತೆ ಅವಕಾಶ ಮಾಡಿಕೊಟ್ಟಿರುವಂಥದ್ದು ಈ ಸರ್ಕಾರದ ಹೊಣೆ ಹೊತ್ತಿರತಕ್ಕಂಥ ಮುಖ್ಯ ಮಂತ್ರಿಗಳಾದ ಶ್ರೀ ಜೆ.ಹೆಚ್. ಪಟೇಲರಿಗೂ ಹಾಗೂ ನಮ್ಮ ಈಶ್ವರಪ್ಪನವರ ಪಕ್ಷದ ಮಾನ್ಯ ಪ್ರಧಾನ ಮಂತ್ರಿಗಳಿಗೂ ಈ ಸಂದರ್ಭದಲ್ಲಿ ಅಭಿನಂದನೆ ಸಲ್ಲಬೇಕಾಗುತ್ತದೆಂದು ಹೇಳಬೇಕಾಗುತ್ತದೆ. ಇವತ್ತು ಕೇಂದ್ರದಲ್ಲಿ ಬಿ.ಜೆ.ಪಿ. ಸರ್ಕಾರ ಈ ಒಂದು ಒಳ್ಳೆಯ ಕೆಲಸವನ್ನು ಬಿಟ್ಟು ಬೇರೆ ಯಾವ ಒಳ್ಳೆಯ ಕೆಲಸವನ್ನು ಮಾಡಿಲ್ಲವೆಂದು ಇವತ್ತು ನಾನು ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ಬಿ.ಜೆ.ಪಿ. ಸರ್ಕಾರ ಬಂದರೆ ಸಹ ಸದಸ್ಯರಾಗಲು ಒಂದು ಅವಕಾಶ ಸಿಕ್ಕಿತು ಇವರಿಗೆ.

ಅಧ್ಯಕ್ಷರು :— ಮಾನ್ಯ ಶಿವರಾಮೇಗೌಡರೆ, ಇಂಗ್ಲೀಷಿನಲ್ಲಿ ಒಂದು ಗಾದೆ ಇದೆ. ``Coming events cast their shadows in advance." ಎಂದು ಕನ್ನಡದಲ್ಲಿ ಅದನ್ನು ಹೇಗೆ ತರ್ಜುಮೆ ಮಾಡಬೇಕೆಂದು ಗೊತ್ತಿಲ್ಲ. ಹಾಗೇನಾದರೂ ನಿಮ್ಮ ಮಾತು ಅಂತ. ಅಂದರೆ, ಮುಂದೆ ಬರತಕ್ಕಂಥ ಘಟನೆಗಳನ್ನು ತಮ್ಮ ಛಾಯೇಯನ್ನು ಮೊದಲೇ ತೋರಿಸುತ್ತೇವೆಂದು ಆ ಗಾದೆ ಮಾತು. ನಿಮ್ಮ ಮಾತಿನ ಧಾಟಿ ಆ ಅರ್ಥದಲ್ಲಿ ಏನಾದರೂ ಇದೆಯೇ ಎಂದು.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಅಧ್ಯಕ್ಷರೆ, ಒಂದು ಮಾತನ್ನು ತಮ್ಮ ಮೂಲಕ ನಾನು ಸ್ಪಷ್ಟ ಮಾಡುತ್ತೇನೆ. ಇವತ್ತು ಈ ಪಕ್ಷದಲ್ಲಿ ಇದ್ದುಕೊಂಡು ಆಪಕ್ಷದವರಿಂದ ಒಂದು ಜವಾಬ್ದಾರಿ ಸ್ಥಾನವನ್ನು ತೆಗೆದುಕೊಂಡು ಆ ಪಕ್ಷಕ್ಕೆ ಋಣಿಯಾಗಿ ಇರುತ್ತೇನೆಯೇ ಹೊರತು ಬೇರೆ ಪಕ್ಷಕ್ಕೆ ಹೋಗುವವನಲ್ಲ. ಬಹಳ ಜನ ಬೇರೆ ಪಕ್ಷಕ್ಕೆ ಹೋಗದೆ ರಾಜಕೀಯ ನಡೆಯುವುದಿಲ್ಲ. ತಾವು ಈ ಆರೀತಿ ತಪ್ಪು ತಿಳಿದುಕೊಳ್ಳುವುದು ಬೇಡ. ನಾನು ನನ್ನ. ಸ್ವಂತ ಶಕ್ತಿಯ ಮೇಲೆ ಗೆದ್ದು, ನನ್ನ ಬೆಂಬಲವನ್ನು ಅವರಿಗೆ ಕೊಟ್ಟಿದ್ದೇನೆ. ಆ ಜನತಾದಳದ ಸರ್ಕಾರದ ಆರ್ಶೀವಾದವು ನನ್ನ ಮೇಲೆ ಇದೆ. ನೀವು ಮುಂದಿನ ಭವಿಷ್ಯದ ವಿಚಾರವನ್ನು ಹೇಳಿದಿರಿ.

ಅಧ್ಯಕ್ಷರು :— ನೀವು ತಪ್ಪು ತಿಳಿದುಕೊಂಡಿದ್ದೀರಿ. ಮುಂದೆ ಆಗಬಹುದಾದಂಥ ಘಟನೆಗಳ ಬಗ್ಗೆ ನಾನು ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅಧ್ಯಕ್ಷರೆ, ಶಿವರಾಮೇಗೌಡರು ಹಾಗೂ ತಾವು ಹೇಳಿದ್ದನ್ನು ಅಪಾರ್ಥ ಮಾಡಿಕೊಂಡರು. ಹಿಂದಿಯಲ್ಲಿ ಒಂದು ಗಾದೆ ಇದೆ. ಪಾನಿ ತೇರಾ ರಂಗ್ ಕೈಸಾ ಅಂದರೆ ಜನ್ಮ ಡಾಲೆ ವೈಸಾ ಅಂತ. ಅಂದರೆ ಬಣ್ಣ ಹೇಗೆಂದರೆ, ನೀವು ಯಾವ ನೀರಿನಲ್ಲಿ ಬಣ್ಣ ಹಾಕುತ್ತೀರಿ ಆ ರೀತಿ ಎಂದು ಆಗುತ್ತದೆ. ಪಾಪ ಅವರು ಆ ರೀತಿಯಾಗಿದ್ದಾರೆ. ನೀವು ಅವರಿಗೆ ಏಕೆ ಆ ರೀತಿ ಮಾಡುತ್ತೀರಿ?

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಖರ್ಗೆಯವರು ಹೇಳಿದಂತೆ, ಎಲ್ಲಿ ಬೇಕಾದರೂ ಹಾಕಿದರೂ ಬಣ್ಣ ಬದಲಾವಣೆ ಆಗುತ್ತದೆಂದು ಅಂದರೆ ನೀರು ಇದ್ದಂತೇನೆ ಆದರೆ ನೀವು ಒಂದು ಮಾತನ್ನು ತಿಳಿದುಕೊಳ್ಳಿ, ನಮ್ಮಂಥವರ ಸಪ್ಪೋರ್ಟ್ ಇಲ್ಲದೆ ನೀವು ಇಲ್ಲಿ ಅಧಿಕಾರ ಮಾಡುವುದಕ್ಕೆ ಆಗುವುದಿಲ್ಲ. ನಾವು ಮಾನ್ಯ ಪುಟ್ಟಣ್ಣಯ್ಯನವರು ಹಾಗೂ ವಾಟಾಳ್ ನಾಗರಾಜ್‌ರವರು ಇಲ್ಲದೆ ಅಧಿಕಾರ ಮಾಡುವುದಕ್ಕಾಗುವುದಿಲ್ಲವೆಂದು ಹೇಳುತ್ತೇನೆ.

ಅಧ್ಯಕ್ಷರು :— ನೀವು ಹಳಿಯನ್ನು ತಪ್ಪುತ್ತಾ ಇದ್ದೀರಿ. ನೀವು ಮಾನ್ಯ ಈಶ್ವರಪ್ಪನವರನ್ನು ಹಾಗೂ ಪ್ರಧಾನ ಮಂತ್ರಿಗಳನ್ನು ಹೊಗಳುವುದನ್ನು ನೋಡಿದರೆ, ಮುಂದೆ ನಡೆಯಬಹುದಾದ ಘಟನೆಗಳ ಬಗ್ಗೆ ಅಡ್ವಾನ್ಸ್‌ಆಗಿ ಹೇಳುತ್ತಿದ್ದೀರಾ ಎಂದು. ನೀವು ಪಾರ್ಟಿಯನ್ನು ಬದಲಾಯಿಸಿ ಅವರ ಜೊತೆಯಲ್ಲಿ ಹೋಗುತ್ತೀರಿ ಎಂದು ಹೇಳಿದ್ದಲ್ಲ.

ಶ್ರೀ ವಾಟಾಳ್ ನಾಗರಾಜ್ :— ಮುಂದೆ ಆಗಬೇಕಾದಂಥ ವಿಚಾರದ ಬಗ್ಗೆ ಚಿಂತೆ ಅಲ್ಲವೆ? ತಮಗೂ ಅದೇ ಚಿಂತೆ ಅಲ್ಲವೇ?

ಅಧ್ಯಕ್ಷರು :— ನಿಮ್ಮ ಎಚ್ಚರಿಕೆ ನಡೆಯುವುದಿಲ್ಲ, ತೀರ್ಮಾನ ಆಗುವುದು ಅಲ್ಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಈ ಸರ್ಕಾರ ಒಳ್ಳೆಯ ಕೆಲಸ ಮಾಡಿದೆ. ಒಳ್ಳೆಯ ಕೆಲಸ ಮಾಡಿದೆ ಎಂದು ಹೇಳುವ ಧಾಟಿಯಲ್ಲಿ ಹೇಳಿದ್ದೇನೆ. ಮತ್ತು ಇನ್ನು ಯಾವುದೂ ಇಲ್ಲ. ಮಾನ್ಯ ಪ್ರಧಾನ ಮಂತ್ರಿಗಳಾದ ಶ್ರೀ ಅಟಲ್ ಬಿಹಾರ್ ವಾಜಪೇಯಿಯವರು ಒಂದು ಒಳ್ಳೆಯ ಕೆಲಸ ಮಾಡಿದ್ದಾರೆ. ಅವರು ಒಳ್ಳೆಯ ಕೆಲಸ ಮಾಡಿದ್ದಾರೆಂದು ಹೇಳಿದಾಕ್ಷಣ ಮುಂದಿನ ಭವಿಷ್ಯ ಇಟ್ಟುಕೊಂಡು ಹೇಳಿದ್ದೇನೆ ಎನ್ನುವ ಭಾವನೆ ಇಟ್ಟುಕೊಂಡು ತಾವು. ಹಾಗೂ ಮಾನ್ಯ ಖರ್ಗೆಯವರು ಹೇಳಿದರೆ ಹೇಗೆ?

ಶ್ರೀ ವಾಟಾಳ್ ನಾಗರಾಜ್ :— ಮುಂದೆ ಭಾರತೀಯ ಜನತಾ ಪಾರ್ಟಿ ಬಂದರೆ ನೀವು ಅಲ್ಲಿ ಕೂಡ ಸಹ ಸದಸ್ಯರಾಗಿ ಇರುತ್ತೀರಿ ಎನ್ನುವ ಭವಿಷ್ಯ ಅದರ ಅರ್ಥ.

ಅಧ್ಯಕ್ಷರು :— ನಾನು ಆ ಅರ್ಥದಲ್ಲಿ ಹೇಳಲಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ಅಂದರೆ ಅವರು ಗೆಲ್ಲುವುದು ಗ್ಯಾರಂಟಿ ಎಂದು ಆಯಿತು.

ಅಧ್ಯಕ್ಷರು :— ನೀವು ಸರ್ಕಾರದ ಪರವಾಗಿ, ಇಡೀ ಪಕ್ಷದ ಪರವಾಗಿ ಮಾತನಾಡುತ್ತಿದ್ದೀರಿ, ನಾನು ಶಿವರಾಮೇಗೌಡರ ವಿಚಾರವನ್ನು ಹೇಳಲಿಲ್ಲ. ಮುಂದಿನ ಘಟನೆಗಳ ಬಗ್ಗೆ ಏನಾದರೂ ಸೂಚನೆಯನ್ನು ಕೊಡುತ್ತಿದ್ದೀರಾ ಎಂದು ನಾನು ಅಷ್ಟೇ ಹೇಳಿದ್ದುದು. ಅದು ನಿಮಗೆ ಅರ್ಥವಾಗಲಿಲ್ಲ. ಆಮೇಲೆ ನಾನು ಹೇಳುತ್ತೇನೆ. ವೈಯಕ್ತಿಕವಾಗಿ ನಾನು ಶಿವರಾಮೇಗೌಡರು ಎಲ್ಲೋ ಹೋಗುತ್ತಾರೆ ಎಂದು ಹೇಳಲಿಲ್ಲ.

ಶ್ರೀಮತಿ ಬಿ.ಟಿ.ಲಲಿತಾನಾಯಕ್ :— ಮಾನ್ಯ ಅಧ್ಯಕ್ಷರೆ, ಮಾನ್ಯ ಶಿವರಾಮೇಗೌಡರಿಗೆ ನಿನ್ನೆ-ಮೊನ್ನೆಯ ಬಿ.ಜೆ.ಪಿ. ಪಕ್ಷದ ಪ್ರಧಾನಿಗಳು ಕಣ್ಣಿಗೆ ಬಿದ್ದರು. ಈ ಕರ್ನಾಟಕದಿಂದ ಹೋಗಿ ಪ್ರಧಾನಿಯಾಗಿ ಇಷ್ಟೆಲ್ಲಾ ಕೆಲಸವನ್ನು ಮಾಡಿದಂತಹ ಒಬ್ಬ ಪ್ರಧಾನಿಯವರ ನೆನಪಾಗಲಿಲ್ಲವಲ್ಲಾ, ಅವರ ಬಗ್ಗೆ ಒಂದು ಮಾತನ್ನು ಸಹ ಹೇಳಲಿಲ್ಲವಲ್ಲಾ ಅಂತ ನನ್ನ ಪ್ರಶ್ನೆ. ಅವರು ನಿಜವಾಗಿಯೂ ಈ ಪಕ್ಷದಲ್ಲಿದ್ದರೆ...

ಅಧ್ಯಕ್ಷರು :— ಈಗ ಇರುವವರ ವಿಚಾರವನ್ನು ಮಾತನಾಡುವುದನ್ನು ಬಿಟ್ಟು ಹೋದವರ ವಿಚಾರವನ್ನು ಹೇಳಿದರೆ ಹೇಗೆ?

ಶ್ರೀಮತಿ ಬಿ.ಟಿ. ಲಲಿತಾನಾಯಕ್ :— ಮಾನ್ಯ ದೇವೇಗೌಡರು ಪ್ರಧಾನಿಯಾಗಿದ್ದುದಂತೂ ನಿಜ ಅಲ್ಲವೇ?

ಅಧ್ಯಕ್ಷರು :— ಈಗ ಅವರು ಅಧಿಕಾರದಲ್ಲಿ ಇದ್ದಾರೆಯೇ?

ಶ್ರೀಮತಿ ಬಿ.ಟಿ. ಲಲಿತಾ ನಾಯಕ್ :— ಈಗ ಅವರು ಅಧಿಕಾರದಲ್ಲಿ ಇಲ್ಲ. ಇದ್ದವನ್ನು ಹೇಳಬಹುದಾಗಿತ್ತಲ್ಲಾ.

ಅಧ್ಯಕ್ಷರು :— ಯಾವುದು ನಾಣ್ಯ ಚಲಾವಣೆಯಾಗುತ್ತದೆ ಅದನ್ನು ಮಾತನಾಡುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಶ್ರೀಮತಿ ಬಿ.ಟಿ. ಲಲಿತಾ ನಾಯಕ್‌ರವರು ಹೇಳಿದಂತಹ ಮಾತನ್ನು ನಾನು ಒಪ್ಪುತ್ತೇನೆ. ಮಾನ್ಯ ದೇವೇಗೌಡರು ನಮ್ಮ ರಾಷ್ಟ್ರೀಯ ನಾಯಕರು, ಅವರು ಒಳ್ಳೆಯ ಕೆಲಸವನ್ನು ಮಾಡಿದ್ದನ್ನು ನಾನು ಹೊಗಳುತ್ತೇನೆ. ನಾವು ಯಾವತ್ತು ದೇವೇಗೌಡರ ಬಗ್ಗೆ ಹೇಳಲಿಲ್ಲ. ಮಾನ್ಯ ದೇವೇಗೌಡರ ಬಗ್ಗೆ ಹಳ್ಳಿಹಳ್ಳಿಗಳಲ್ಲಿ ... ನಾನು ಕಳೆದ ಚುನಾವಣೆಯಲ್ಲಿ ಗಂಟಲು ಕಿತ್ತುಕೊಂಡು ಹೋಗುವಷ್ಟು ಅರಚಿದ್ದೇನೆ. ಈಗಲೂ ಸಹ ಅವರು ನಮ್ಮ ರಾಷ್ಟ್ರೀಯ ನಾಯಕರು.

ಅಧ್ಯಕ್ಷರು :— ಸದನದಲ್ಲೇ ಮಾಡಲಿಲ್ಲ ನಿಮಗಿಂತ ಪ್ರಬಲವಾಗಿ ಯಾರೂ ಸಮರ್ಥನೆ ಮಾಡಲಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಈಗ ರಾಜ್ಯದಲ್ಲಿರುವವರು ಮಾನ್ಯ ಜೆ.ಹೆಚ್. ಪಟೇಲರು.....

ಶ್ರೀ ವಾಟಾಳ್ ನಾಗರಾಜ್ :— ಈಗ ಮಾನ್ಯ ಜೆ.ಹೆಚ್. ಪಟೇಲರ ಬಗ್ಗೆ ಅರಚುತ್ತಿದ್ದಾರೆ. ಅದರಲ್ಲೇನೂ ತಪ್ಪಿಲ್ಲ. ಒಂದು ವಿಚಾರವನ್ನು ನಾನು ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ಮಾನ್ಯ ಶಿವರಾಮೇಗೌಡರು ಎಲ್ಲೇ ಇರಲಿ, ಅವರು ಬೆಂಬಲ ಕೊಟ್ಟಿರುವಂತದ್ದನ್ನು ನಾನು ಒಪ್ಪಬೇಕಾದುದು ಕರ್ತವ್ಯ.

ಅಧ್ಯಕ್ಷರು :— ಮಾನ್ಯ ಎ.ಟಿ. ರಾಮಸ್ವಾಮಿಯವರು ಅಪರೂಪಕ್ಕೆ ಎದ್ದಿದ್ದಾರೆ. ಅವರು ಒಳ್ಳೆಯವರಿಗೆ ಕೋಲ್ಡ್ ಆಗಿರಿ.

ಶ್ರೀ ಎ.ಟಿ. ರಾಮಸ್ವಾಮಿ(ಅರಕಲಗೂಡು) :— ಮಾನ್ಯ ಅಧ್ಯಕ್ಷರೆ, ನಮ್ಮ ಸರ್ಕಾರ ಅಧಿಕಾರದಲ್ಲಿ ಇದ್ದಾಗ ಮಾನ್ಯ ಶಿವರಾಮೇಗೌಡರು ಸಹ ಸದಸ್ಯರಾಗಿದ್ದರು. ಅವರು ನಮ್ಮ ಪಕ್ಷದಿಂದ ಚುನಾವಣೆಗೆ ನಿಲ್ಲಲು ಟಿಕೇಟನ್ನು ಕೇಳಿದರು ನಮ್ಮ ಪಕ್ಷದವರು ಟಿಕೇಟನ್ನು ನಿರಾಕರಿಸಿದರು. ಅವರು ಸ್ವಂತ ಶಕ್ತಿಯಿಂದ ಚುನಾವಣೆಯಲ್ಲಿ ನಿಂತು ಗೆದ್ದು ಬಂದಿದ್ದಾರೆ. ಇವತ್ತು ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದಿದೆ ಅವರು ಈಗ ಅದರ ಸಹಸದಸ್ಯರಾಗಿದ್ದಾರೆ. ಅವರ ಆಶೀರ್ವಾದದಿಂದ ಬೆಂಗಳೂರು

ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾಗಿದ್ದಾರೆ. ಈಗ ಮಾನ್ಯ ಶಿವರಾಮೇಗೌಡರು ಜನತಾದಳದ ಟಿಕೆಟ್ ಕೇಳುತ್ತಾರೆಯೇ? ಆ ವಿಶ್ವಾಸ ಅವರಿಗೆ ಇದೆಯೇ? ಅವರು ಸ್ವಲ್ಪ ಆತ್ಮಶೋಧನೆಯನ್ನು ಮಾಡಿಕೊಂಡು ಹೇಳಬೇಕು. ತಾವು ವಂದನಾನಿರ್ಣಯವನ್ನು ಮಂಡಿಸಿ ಮಾತನಾಡುತ್ತಿದ್ದೀರಿ. ಆದಕ್ಕೆ ತಾವು ಆ ಪಕ್ಷದ ಟಿಕೇಟನ್ನು ಕೇಳಬೇಕಲ್ಲಾ. ತಾವು ಜನತಾದಳದ ಟಿಕೇಟನ್ನು ಕೇಳುತ್ತೀರಲ್ಲಾ? ನಾನು ಆ ಸರದಿಗೆ ಬರುವುದಿಲ್ಲ. ನಿಮಗೆ ಆ ವಿಶ್ವಾಸ ಇದೆಯಾ ಎಂದು ನಾನು ಕೇಳುತ್ತಿರುವುದು.

ಶ್ರೀ ಎಲ್. ಆರ್ ಶಿವರಾಮೇಗೌಡ :— ನಾನು ಮತ್ತು ನಾಗೇಗೌಡರು ಇಬ್ಬರೂ ಸಹ ಮಾನ್ಯ ಭೈರೇಗೌಡರಿಗೆ ಪಕ್ಷದಿಂದ ನನಗೆ ಚುನಾವಣೆಗೆ ನಿಲ್ಲಲು ಟಿಕೇಟನ್ನು ಕೊಡಿಸಬೇಕೆಂದು ಜವಾಬ್ದಾರಿಯುತವಾಗಿ ಕೇಳಿಕೊಂಡಿದ್ದೇವೆ. ಈ ಅನುಮಾನ ನಿಮಗೆ ಏಕೆ? ಟಿಕೇಟನ್ನು ಕೊಡುವುದು ಬಿಡುವುದು ಅವರಿಗೆ ಸೇರಿದ್ದು, ಮಾನ್ಯ ರಾಮಾಸ್ವಾಮಿಯವರೇ, ಟಿಕೇಟನ್ನು ಕೊಡದೆ ಇಬ್ಬರೂ ಸಹ ಚುನಾವಣೆ ನಿಲ್ಲಲು ವಾಟಾಳ್ ನಾಗರಾಜ್ ಹಾಗೂ ನನ್ನನು ಬಿಟ್ಟರೆ ಈ ಶಕ್ತಿ ಎಷ್ಟು ಜನರಿಗೆ ಇದೆ. ಈ ಶಕ್ತಿ ಇರುವಂತದ್ದು ಈ ಸದನದಲ್ಲಿ ಬೆರಳು ಎಣಿಸತಕ್ಕಂತವರಿಗೆ ಅದರಲ್ಲಿ ಮೊದಲನೇ ಲೈನ್‌ನಲ್ಲಿ ಕುಳಿತಿರುವಂತಹ ಶ್ರೀ ವಾಟಾಳ್ ನಾಗರಾಜ್‌ರವರಿಗೆ, ಅವರಿಗೆ ಪಕ್ಕ ಕುಳಿತುಕೊಳ್ಳುವಂಥ ಶಿವರಾಮೇಗೌಡ.

ಶ್ರೀ ಎ.ಟಿ ರಾಮಾಸ್ವಾಮಿ :— ನಾನು ಶಿವರಾಮೇಗೌಡ ಆಗುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಲ್. ಆರ್. ಶಿವರಾಮೇಗೌಡ :— ನೀವು ಆಗಲೂ ಬೇಡಿ, ನಾನು ಎ.ಟಿ. ರಾಮಸ್ವಾಮಿಯವರಾಗುವುದಕ್ಕೆ ಸಾಧ್ಯವಿಲ್ಲ. ಇಷ್ಟು ಮಾತನ್ನು ಹೇಳುತ್ತಾ, ಇವತ್ತು ನಮ್ಮೆಲ್ಲರಿಗೂ ನೆಮ್ಮದಿ ತರತಕ್ಕಂತಹ ಅವಕಾಶವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಿ, ಇದುವರೆಗೂ ಸಹಿತ ಮಹಾರಾಜರ ಕಾಲದಿಂದ ಹಿಡಿದು ಕಾವೇರಿಗೋಸ್ಕರ ನಾವು 2500 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ 2500 ಕೋಟಿ ರೂಪಾಯಿಗಳಲ್ಲಿ 1200 ಕೋಟಿ ರೂಪಾಯಿಗದಳನ್ನು ಖರ್ಚು ಮಾಡಿದ್ದೇವೆ. ತಾವು ಈ ಸದನದಲ್ಲಿ ಅರ್ಥ ಮಾಡಿಕೊಳ್ಳಬೇಕು. ಈ ಸರ್ಕಾರ ಅಧಿಕಾರಕ್ಕೆ ಬಂದು ನಾಲ್ಕುವರೆ ವರ್ಷಗಳಲ್ಲಿ ನೀರಾವರಿಗೋಸ್ಕರ, ಆದ್ಯತೆಯನ್ನು ಕೊಡುತ್ತೇವೆಂದು ರಾಜ್ಯಪಾಲರ ಭಾಷಣದ ಮೂಲಕ ಹೇಳಿದ್ದೇವೋ, ಆ ಹಿನ್ನಲೆಯಲ್ಲಿ ನಮ್ಮ ಸರ್ಕಾರ 1200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ. ಮಹಾರಾಜರ ಕಾಲದಲ್ಲಿ ಕೆ.ಆರ್ ಸಾಗರವನ್ನು ಕಟ್ಟಿದರು. ಇವತ್ತು ಆ ಕನ್ನಂಬಾಡಿ ಕಟ್ಟೆಯನ್ನು ಒಂದು ಸಾವಿ ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದರೂ ಅದನ್ನು ಕಟ್ಟಲು ಸಾಧ್ಯವಿಲ್ಲ. ಈವತ್ತು ಇದುವರೆಗೂ ಬಂದು ಹೋದಂತಹ

ಸರ್ಕಾರಗಳು 4-50 ವರ್ಷದಲ್ಲಿ 1300 ಕೋಟಿ ರೂಗಳ ಸಾಧನೆಯನ್ನು ಮಾಡಿರುವುದನ್ನು ಸದನದ ಗಮನಕ್ಕೆ ತಂದು ನಮ್ಮ ಸರ್ಕಾರ ನೀರಾವರಿಗೋಸ್ಕರ1200 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ಸರ್ಕಾರ ಹಣವನ್ನು ಒದಗಿಸುವುದರಲ್ಲಿ, ಕೆಲಸವನ್ನು ಮುಗಿಸುವುದರಲ್ಲಿ ಸಫಲವಾಗಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಇನ್ನು ಬಾಕಿ ಇರುವಂತಹ ಕಾವೇರಿ ಕಣಿವೆಯಲ್ಲಿ ಕೆಲಸಕಾರಗಳನ್ನು ಮುಗಿಸಬೇಕಾದರೆ ಇನ್ನು ಎರಡು ಸಾವಿರ ಕೋಟಿ ರೂಗಳು ಬೇಕಾಗುತ್ತದೆ. ಇವತ್ತು ಕೃಷ್ಣ ಜಲ ಭಾಗ್ಯ ನಿಗಮದಲ್ಲಿ ಮಾಡಿದ್ದೀರಿ, ಅದೇ ತರಹ ಒಂದು ಹಣಕಾಸು ನಿಗಮವನ್ನು ಮಾಡಿ, ಕಾವೇರಿಗೂ ಸಹಿತ ಮಾಡಿ ಈ ಕೆಲಸಕಾರ್ಯಗಳನ್ನು ತಕ್ಷಣವಾಗಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಮುಗಿಸಿಕೊಡಬೇಕೆಂದು ನಾನು ಮಾನ್ಯ ಹಣಕಾಸಿನ ಸಚಿವರಲ್ಲಿ ಒತ್ತಾಯ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು 3-4 ವರ್ಷಗಳಲ್ಲಿ ಏನೆಲ್ಲಾ ಕೆಲಸಕಾರ್ಯಗಳು ಆಗಿದೆ ಎಂದು ನಾವು ಅರ್ಥ ಮಾಡಿಕೊಳ್ಳಬೇಕಾಗುತ್ತದೆ. ಇವತ್ತು ಹೇಮಾವತಿಯಿಂದ ತುಮಕೂರಿಗೆ 124 ಕಿ.ಮಿ.ವರೆಗೆ ನೀರನ್ನು ಕೊಟ್ಟಿದ್ದೇವೆ. ಈ ವರ್ಷದ ಡಿಸೆಂಬರ್‌ನೊಳಗೆ ಕುಣಿಗಲ್‌ಗೆ ನೀರನ್ನು ಕೊಡಬೇಕೆಂದು ನೀರ್ಮಾನ ಮಾಡಿದ್ದೇವೆ. ಇವತ್ತು ನಾಗಮಂಗಲ ಮತ್ತು ಬಸರಾಳು ಈ ಮೂರು ತಾಲ್ಲೂಕುಗಳಿಗೆ, ಭಾಗಗಳಿಗೆ 500 ಕೋಟಿ ರೂಪಾಯಿಗಳನ್ನು ಖರ್ಚು 4 ವರ್ಷಗಳಲ್ಲಿ ಮಾಡಿರತಕ್ಕಂಥದ್ದು, ಹಿಂದಿನ ವರ್ಷಗಳಲ್ಲಿ ಈ ಕಾರ್ಯಕ್ಕೆ 180 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿರುವುದನ್ನು ನಾನು ಈ ಸಂದರ್ಭದಲ್ಲಿ ಜ್ಞಾಪಕ ಮಾಡಬೇಕಾಗುತ್ತದೆ. ಜನರು ನಮ್ಮ ಹಿಂದೆ ಇದ್ದಾರೆ. ಈ ಸದನದಲ್ಲಿ ವೈ.ಕೆ. ರಾಮಯ್ಯನವರು. ಶ್ರೀ ಮುದ್ದಹನುಮೇಗೌಡರು ಇಲ್ಲಿ ಇಲ್ಲ. ಅವರುಗಳು ತುಮಕೂರಿಗೆ ನೀರು ಬಿಡುವಂತಹ ಕೆಲಸವನ್ನು ಸಧ್ಯದಲೇ ಮಾಡುತ್ತೇವೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ನಾಗಮಂಗಲ-ಬಸರಾಳಿಗೆ ಈಗಾಗಲೇ 30 ಸಾವಿರ ಎಕರೆಗೆ ನೀರಾವರಿಯನ್ನು ಕೊಟ್ಟಿದ್ದೇವೆ. ಜನ ಇವತ್ತು ಅಲ್ಲಿ ನೆಮ್ಮದಿಯಿಂದ ಉಸಿರನ್ನು ಬಿಡುತ್ತಿದ್ದಾರೆ. ಜನರು ತೃಪ್ತಿಯನ್ನು ವ್ಯಕ್ತಪಡಿಸುತ್ತಿದ್ದಾರೆ. ಪರವಾಗಿಲ್ಲ ಇವತ್ತು ಸರ್ಕಾರ ನೀರಾವರಿಗೆ ಆದ್ಯತೆಯನ್ನು ಕೊಟ್ಟಿದ್ದಾರೆ ಎಂದು ಹೇಳುತ್ತಿದ್ದಾರೆ. ರಸ್ತೆಗಳಲ್ಲಿ ಇವತ್ತು ಗುಂಡಿ ಬಿದ್ದಿರಬಹುದು, ಬೇರೆ ಇಲಾಖೆಗಳಲ್ಲಿ ಕೆಲಸಗಳು ಕಡಿಮೆಯಾಗಿರಬಹುದು. ನೀರಾವರಿಗೆ ಹೆಚ್ಚಿನ ಹಣವನ್ನು ಒದಗಿಸಿದ್ದಾರೆಂದು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಯುಗಚಿ ಯೋಜನೆಗೆ 40 ಕೋಟಿ ರೂಪಾಯಿಗಳ ಕೆಲಸ ಇದೆ. ಡ್ಯಾಂ ಕೆಲಸವೆಲ್ಲಾ ಮುಗಿದಿದೆ. ಅಲ್ಲಿ ಲೈನಿಂಗ್ ಮತ್ತು ಕೆನಾಲ್ ವರ್ಕ್ ಮಾತ್ರ ಉಳಿದುಕೊಂಡಿದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ವಾಟೇಹೊಳೆ 1971ರಲ್ಲಿ ಇದಕ್ಕೆ ಶಂಕುಸ್ಥಾಪನೆಯನ್ನು ಮಾಡಿದರು.

ಇದುವರೆಗೂ ಅಲ್ಲಿ ಕೆಲಸ ಮುಗಿಸಿರಲಿಲ್ಲ. ಈಗ ಆ ಕೆಲಸವನ್ನು ಮುಗಿಸುವಂತಹ ಕೆಲಸವನ್ನು ಮಾಡಿದ್ದೇವೆ. ಬಾಗೂರು ನವಿಲೆ ಏತನೀರಾವರಿ ಎರಡು ಭಾಗದಲ್ಲಿ ಅದರ ಹೊರಭಾಗ ಮತ್ತು ಒಳಭಾಗದಲ್ಲಿಯೂ ಸಹಿತ ಎರಡು ಏತ ನೀರಾವರಿಗಳನ್ನು ಈಗಾಗಲೇ ಮುಗಿಯುವ ಹಂತಕ್ಕೆ ಬಂದಿದೆ. ಆ ಕೆಲಸ ಮುಗಿದಿದೆ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಈ ವರುಣಾನಾಲೆಗೆ ನಾಲ್ಕು ವರ್ಷದಲ್ಲಿ 160 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀವಿ. ಮಾನ್ಯ ರಾಜಶೇಖರಮೂರ್ತಿಯವರು ಮೈಸೂರಿನಲ್ಲಿ, ಹಣಕಾಸಿನ ಸಚಿವರಾಗಿದ್ದಾಗಲೂ ಸಹಿತ ಇದನ್ನು ಮಾಡಬೇಕೆಂದು ಬಹಳ ಪ್ರಯತ್ನಪಟ್ಟರು. ಅವರ ಕಾಲದಲ್ಲಿ ಈ ಕೆಲಸ ಸಂಪೂರ್ಣಮಾಡಲಿಕ್ಕೆ ಆಗಲಿಲ್ಲ ಎಂಬ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ದೇವರಾಜ ಅರಸುರವರ ಕನಸು ಇವತ್ತು ನನಸಾಗುತ್ತದೆ. ವರುಣಾನಾಲೆಯಿಂದ ಮಂಡ್ಯ ಮತ್ತು ಮೈಸೂರಿಗೆ ಇದ್ದಂತಹ ಜಗಳವನ್ನು ರಾಜಿಮಾಡಿ ಇವತ್ತು ಆ ಕೆಲಸವನ್ನು ಪ್ರಾರಂಭಮಾಡಿ ಈ ವರ್ಷದ ಜುಲೈ-99ಕ್ಕೆ ನೀರು ಕೊಡುವಂತಹ ಕೆಲಸವನ್ನೂ ಮಾನ್ಯ ಉಪಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯನವರ ಅಧ್ಯಕ್ಷತೆಯಲ್ಲಿ ಮೈಸೂರು ಮತ್ತು ಮಂಡ್ಯ ಜಿಲ್ಲೆಯ ರೈತರನ್ನು ಕೂರಿಸಿ ಹೆಚ್ಚು ಹಣವನ್ನು ಕೊಡಿಸಿ ವರುಣಾ ನಾಲಾ ಕೆಲಸವನ್ನು ಸಂಪೂರ್ಣ ಮಾಡಿರುವಂತದ್ದನ್ನು ನಾನು ಈ ಸಂದರ್ಭದಲ್ಲಿ ಒಪ್ಪಿಕೊಳ್ಳಬೇಕಾಗುತ್ತದೆ. ಆದೇ ಪ್ರಕಾರ ರಾಮಪುರ ಯೋಜನೆ 115 ಕೋಟಿ ರೂಪಾಯಿಗಳ ಕೆಲಸ. ಹುಲ್ಲಳ್ಳಿ ನಾಲಾ ಆಧುನೀಕರಣ ಕೆಲಸವು ಪ್ರಾರಂಭವಾಗಿ ಒಂದು ತಿಂಗಳಾಯಿತು. ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಬಂಗಾರಪ್ಪನವರು ಅಧಿಕಾರದಲ್ಲಿದ್ದಾಗ ಪಿರಿಯಾಪಟ್ಟಣ ಲಿಫ್ಟ್ ಇರಿಗೇಷನ್‌ಗೆ ಹೋಗಿ ಶಂಕು ಸ್ಥಾಪನೆಯನ್ನು ಮಾಡಿದ್ದರು. ಈ ಕೆಲಸವು ಬೇರೆ ತಾಂತ್ರಿಕ ಕಾರಣದಿಂದ ನಿಂತುಹೋಗಿತ್ತು. ಈಗ ಅಲ್ಲಿ ಕೆಲಸ ಪ್ರಾರಂಭವಾಗಿದೆ. ತಾರಕ್ಕೆ 1970ರಲ್ಲಿ ಪೂಜೆ ಮಾಡಿದ್ದು, 1988ರಲ್ಲಿ ಇದಕ್ಕೆ ಎರಡನೇ ಪೂಜೆ ಆಗಿತ್ತು. ಎರಡು ಕೆಲಸವೂ ಆಗಿರಲಿಲ್ಲ. ಈಗ 9 ಸಾವಿರ ಎಕರೆಗೆ ನೀರು ಕೊಡುವಂತಹ ಕೆಲಸ ಈ ವರ್ಷ ಪ್ರಾರಂಭವಾಗಿದೆ ಎಂಬ ಮಾತನ್ನು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಇವತ್ತು ವಿ.ಸಿ. ನಾಲಾ ಆಧುನಿಕರಣ ಮಾಡುತ್ತೇವೆಂದು 1980ರಲ್ಲಿ ಮಾನ್ಯ ಮುಖ್ಯಮಂತ್ರಿಗಳಾದ ಶ್ರೀ ಡಿ.ದೇವರಾಜಅರಸುರವರು ಮಾತನ್ನು ಕೊಟ್ಟರು. ವಿ.ಸಿ. ನಾಲಾ ಆಧುನಿಕರಣದ ಬಗ್ಗೆ ಒಂದು ಸರ್ಕಾರಿ ಆಜ್ಞೆ ಆಯಿತು ಆದರೆ 1944ರವರೆಗೆ ಕೆಲಸ ತೆಗೆದುಕೊಳ್ಳಲಿಕ್ಕೆ ಆಗಲಿಲ್ಲ. ಈಗ ಎರಡು ವರ್ಷಗಳಾಯಿತು. ಮಾನ್ಯ ವಿರೋಧಪಕ್ಷದ ನಾಯಕರಾದ ಮಲ್ಲಿಕಾರ್ಜುನ ಖರ್ಗೆಯವರಿಗೆ ತಪ್ಪು ಮಾಹಿತಿ ಕೊಟ್ಟಿದ್ದಾರೆಂದು ಅನಿಸುತ್ತಿದೆ. ವಿ.ಸಿ. ನಾಲಾ ಆಧುನಿಕರಣವಾದಾಗ ದೊಡ್ಡ ಹೇಳಿಕೆಯನ್ನು

ಕೊಟ್ಟರು. ಇಲ್ಲಿ ಭ್ರಷ್ಟಾಚಾರ ನಡೆದಿದೆ, ಆಧುನಿಕರಣದ ಹೆಸರಿನಲ್ಲಿ ಮಾಡಿರತಕ್ಕ ನಾಲೆಗಳು ಸಧ್ಯದಲ್ಲಿಯೇ ಒಡೆಯುತ್ತವೆ. ಸರಿಯಾಗಿ ಕೆಲಸ ಮಾಡಿಲ್ಲ, ಬೋಗಸ್ ಕಂಟ್ರಾಕ್ಟರುಗಳಿಗೆ ಬಿಲ್ ಕೊಟ್ಟಿದ್ದಾರೆ ಅದರ ಬಗ್ಗೆ ಸಿಒಡಿ ತನಿಖೆ ಮಾಡಬೇಕು. ಸಿಬಿಐ ತನಿಖೆಯಾಗಬೇಕೆಂದು ಒತ್ತಾಯವನ್ನು ಮುಂದಿಟ್ಟಿದ್ದಾರೆ. ಈ ಸದನದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ, ವಿ.ಸಿ. ನಾಲಾ ಆಧುನಿಕರಣಕ್ಕಾಗಿ ಸುಮಾರು ನಾವು ನೂರು ಕೋಟಿ ರೂಪಾಯಿಗಳನ್ನು ಅದಕೋಸ್ಕರ ಖರ್ಚು ಮಾಡಿದ್ದೇವೆ. ಇವತ್ತು ಒಂದೊಂದು ಸೇತುವೆ, ಒದೊಂದು ಅಣೆ, ಒದೊಂದು ನಾಲೆಯಾಗಲೀ ಏನೂ ವ್ಯತ್ಯಾಸವಾಗದಹಾಗೆ ವಿ.ಸಿ. ನಾಲಾ ಆಧುನಿಕರಣ ಬಹಳ ಚೆನ್ನಾಗಿ ನಡೆದಿದೆಯೆಂದು ಜನ ಮೆಚ್ಚುಗೆ ವ್ಯಕ್ತಮಾಡುತ್ತಿದ್ದಾರೆ. ಯಾವುದೇ ತರಹದ ತೊಂದರೆಯಾಗಿಲ್ಲ. ಮಹಾರಾಷ್ಟ್ರದಿಂದ ಬಂದಂತಹ ಇಂಜಿನಿಯರುಗಳ ತಂಡ...

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನನಗೆ ತಪ್ಪು ಮಾಹಿತಿ ಕೊಡತಕ್ಕಪ್ರಸಂಗ ಬರುವುದಿಲ್ಲ. ವಿ.ಸಿ. ನಾಲಾ ಆಧುನಿಕರಣ ಮಾಡಲಿಕ್ಕೆ ಪೀಸ್ ಕಂಟ್ರಾಕ್ಟ್ ಸಾವಿರಾರು ಜನರಿಗೆ ಕೊಟ್ಟಿದ್ದಾರೆ, ಕೊಟ್ಯಾಂತರ ರೂಪಾಯಿ ಕೆಲಸವನ್ನು ಅವರಿಗೆ ಇಚ್ಛೆ ಬಂದಹಾಗೆ ಯಾವ್ಯಾವ ಊರಿನಲ್ಲಿ ಅವರ ಜನರು ಇದ್ದಾರೆ ಅವರಿಗೆ ಕೊಟ್ಟು ಅಲ್ಲಿ ಅವ್ಯವಹಾರ ಆಗಿದೆಯೆಂದು ಹೇಳಿದ್ದು ನಿಜ. ಇವತ್ತು ಹೇಳುತ್ತೇನೆ, ಬೇಕಾದರೆ ಸಿಬಿಐಗೆ ರೆಫರ್ ಮಾಡಿ ನಾನು ಬಂದು ಎವಿಡೆನ್ಸ್ ಕೊಡಿ ಅಂದರೆ ನಾನು ಕೊಡುತ್ತೇನೆ. ಎರಡನೆಯದು ಅದೇ ರೀತಿ ಯುಕೆಪಿಯದಿ 400 ಕೋಟಿ ರೂಪಾಯಿ ಕೆಲಸವನ್ನು ರಾತ್ರೋರಾತ್ರಿ ಕೊಟ್ಟಿದ್ದು ನಿಜ. ಅದರ ಬಗ್ಗೆ ಎನ್‌ಕ್ವಾಯರಿ ಮಾಡಿಯೆಂದು ಹೇಳಿದ್ದು ನಿಜ. ಇವತ್ತು ನಾನು ಅದಕ್ಕೆ ಬದ್ಧನಾಗಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಅದು ಸರಿ. ಅದಕ್ಕೆ ಇಲಾಖೆಯ ಮಂತ್ರಿಗಳಾದ ಮಾನ್ಯ ನಾಗೇಗೌಡರು ಉತ್ತರ ಕೊಡಬೇಕು. ಅಂತಹವು ನೀವು ಯಾವ ತನಿಖೆ ಮಾಡಿದರೂ ನಾವು ಸಿದ್ಧರಿದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಎಷ್ಟು ಸೇತುವೆಗಳು ಲೈನಿಂಗ್‌ಗಳು ಸಿಲ್ಟ್ ತೆಗೆದಿದ್ದು ಫೀಡರ್ ಚಾನಲ್‌ಗಳು ಇವೆಲ್ಲ ನೋಡಿ, ಯಾವ ಕಾಲದಲ್ಲೂ ಈ ಕೆಲಸ ಆಗಿರಲಿಲ್ಲ. ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಅದರಲ್ಲೂ ನಾಗೇಗೌಡರು ಇರಿಗೇಷನ್ ಮಿನಿಸ್ಟರ್ ಆದಮೇಲೆ ಈ ಕೆಲಸ ಮಾಡಿದ್ದಾರೆ. ಮೆಚ್ಚುಗೆಯನ್ನು ಜನ ವ್ಯಕ್ತಮಾಡುತ್ತಿದ್ದಾರೆ ಅಧುನಿಕರಣದಿಂದ ಎಂಟುನೂರು ಕ್ಯೂಸೆಕ್ಸ್ ನೀರು ರೈತರಿಗೆ ಜಾಸ್ತಿ ಸಿಕ್ಕಿದೆ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಟೇಲ್‌ಎಂಡ್‌ಗೆ ನೀರು ಬರುತ್ತಿರಲಿಲ್ಲ. ಆಧುನಿಕರಣದಿಂದ ನನ್ನ ನಾಗಮಂಗಲ ತಾಲ್ಲೂಕಿನಲ್ಲಿ ಅನುಕೂಲವಾಗಿದೆ. ನಮ್ಮ ಭಾಗದಲ್ಲಿ ಟೇಲ್‌ಎಂಡ್‌ನಲ್ಲಿ ಜನ ನೀರಿಗೆ ಹಾಹಾಕಾರ ಪಡುತ್ತಿದ್ದರು. ನಮ್ಮಲ್ಲಿ ಎಲ್ಲಾ ಭಾಗಕ್ಕೆ ನೀರು ಸಂಪೂರ್ಣವಾಗಿ ಬರತಕ್ಕದ್ದನ್ನು ನೋಡಿ

ಜನ ಬಹಳ ಸಂತೋಷಪಡುತ್ತಿದ್ದಾರೆ. ಒಂದು ಮಾತನ್ನು ತಮಗೆ ಹೇಳುತ್ತೇನೆ, ನಾವೆಲ್ಲರೂ ಡ್ಯಾಮ್‌ನ ಹತ್ತಿರ ಹೋಗಿದ್ದೆವು. ನಮ್ಮ ಮುಖ್ಯಮಂತ್ರಿಗಳು ಬಂದಿದ್ದರು. ಆಗ ನಮ್ಮ ಇಂಜನಿಯರ್‌ಗಳು ಹೇಳಿದರು, ವಿ.ಸಿ. ನಾಲಾ ಆಧುನಿಕರಣದ ಕೆಲಸ ತೆಗೆದುಕೊಳ್ಳದಿದ್ದರೆ ಡ್ಯಾಮ್‌ಗೆ ದೊಡ್ಡ ಅನಾಹುತವಾಗುತಿತ್ತು. ಡ್ಯಾಮ್ ಪಕ್ಕದಲ್ಲಿ ದೊಡ್ಡ ಹಳ್ಳವಾಗಿತ್ತು ನಾವು ಏನಾದರೂ ನೋಡದಿದ್ದರೆ ಕನ್ನಂಬಾಡಿ ಕಟ್ಟೆಗೆ ಬಹಳ ದೊಡ್ಡ ಗಂಡಾಂತರವಾಗುತಿತ್ತು, ನೋಡಿದ್ದರಿಂದ ಗಂಡಾಂತರ ತಪ್ಪಿತು ಎನ್ನುವ ಮಾತನ್ನು ಅಲ್ಲಿ ಹೇಳಿದರು. ದೊಡ್ಡ ಹೊಂಡವನ್ನು ಮುಚ್ಚಿ ಅದನ್ನು ಸರಿಪಡಿಸಿದ್ದೇವೆ ಎನ್ನತಕ್ಕ ಮಾತನ್ನು ಹೇಳಬೇಕಾಗುತ್ತದೆ.

ಇನ್ನೂ ಮಂಡ್ಯ ನಗರ ತಮಗೆ ಗೊತ್ತಿದೆ. ಮಂಡ್ಯ ನಗರದ ಪಕ್ಕದಲ್ಲಿ ಒಂದು ಕೆರೆಯಿತ್ತು ಸುಮಾರು 35 ವರ್ಷಗಳಿಂದ ಐದಾರು ಜನ ಮುಖ್ಯಮಂತ್ರಿಗಳು ಕೆರೆಯನ್ನು ಒಡೆದು ಜನಗಳಿಗೆ ಸೈಟ ಹಂಚಿ, ಕೆರೆಯಿಂದ ಜನಗಳಿಗೆ ಪ್ರಯೋಜನವಿಲ್ಲ. ಈ ಕೆರೆಯಿಂದ ಸೊಳ್ಳೆಗಳು ಜಾಸ್ತಿ ಆಗುತ್ತಿವೆ ಆ ಕೆಲಸ ಮಾಡಬೇಕೆನ್ನುವ ಮಾತನ್ನು ಬಹಳ ಜನ ಮುಖ್ಯಮಂತ್ರಿಗಳು ಸ್ಥಳಕ್ಕೆ ಹೋದಾಗ ಹೇಳಿದರು. ಇದುವರೆಗೆ ಆ ಕೆಲಸ ಆಗಿರಲಿಲ್ಲ. ಇದು ಮಾನ್ಯ ಬಚ್ಚೇಗೌಡರಿಗೆ ಗೊತ್ತಿದೆ. ಮಾನ್ಯ ಮುಖ್ಯಮಂತ್ರಿಗಳು ಮತ್ತು ನೀರಾವರಿ ಮಂತ್ರಿಗಳಾದ ನಾಗೇಗೌಡರು ಮಂಡ್ಯಕ್ಕೆ ಭೇಟಿ ಕೊಟ್ಟಾಗ ನಾನು ಗೃಹಮಂಡಳಿ ಅಧ್ಯಕ್ಷನಾಗಿದ್ದಾಗ ನಾನು ವಿನಂತಿ ಮಾಡಿದೆ. ಆ ಕೆರೆಯನ್ನು ಗೃಹಮಂಡಳಿ ವಶಕ್ಕೆ ಕೊಡಿ ನಾವು ಸೈಟು ಮಾಡಿ ಹಂಚುತ್ತೇವೆಂದು ಹೇಳಿದೆ. ಅಲ್ಲಿದ್ದ ಇಂಜನಿಯರುಗಳನ್ನು ಕರೆದು ಮುಖ್ಯಮಂತ್ರಿಗಳು ಕೊಡಬಹುದೇ ಎಂದು ಕೇಳಿದರು, ಅವೊತ್ತು ಅಲ್ಲಿ ನೇರವಾಗಿ ಆದೇಶ ಮಾಡಿದರು. ಬೆಳಗ್ಗೆ ಕ್ಯಾಬಿನೆಟ್ ನಲ್ಲಿ ಅಪ್ರೂವಲ್ ಕೊಟ್ಟರು. ಇವತ್ತು ಆ ಕೆರೆಯನ್ನು ಒಡೆದು ಸುಮಾರು 422 ಎಕರೆ ಜಾಗದಲ್ಲಿ ಸೈಟು ಮಾಡುವುದು ಇರಲಿ, ಇಡೀ ಮಂಡ್ಯ ನಗರಕ್ಕೆ ಕೆರೆ ಮಾರಕವಾಗಿತ್ತು. ಯಾರೂ ಸಹಿತ ಅಲ್ಲಿ ವಾಸಮಾಡುವುದಕ್ಕಾಗುತ್ತಿರಲಿಲ್ಲ. ಸೊಳ್ಳೆಗಳ ಪ್ರೊಡಕ್ಷನ್ ಇಡೀ ಮಂಡ್ಯ ಜಿಲ್ಲೆಗೆ ಅಲ್ಲಿಂದಲೇ ಬರುತ್ತಿತ್ತು. 35 ವರ್ಷಗಳ ಅವಧಿಯಲ್ಲಿ ಆಗದಿರತಕ್ಕ ಇಂತಹ ಒಂದು ಬೃಹತ್ ಕೆಲಸವನ್ನು ಜನ ಮೆಚ್ಚುಗೆ ಪಡತಕ್ಕ ರೀತಿಯಲ್ಲಿ ನಮ್ಮ ಸರ್ಕಾರ ನಮ್ಮ ಮುಖ್ಯಮಂತ್ರಿಗಳು ಮಾಡಿದರೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ.

ಹುಲಿಕೆರೆ ಟನಲ್ ಅದನ್ನು ರಿಪೇರಿ ಮಾಡಲಾಗಿದೆ. ಅದನ್ನು ರಿಪೇರಿ ಮಾಡದಿದ್ದರೆ ವಾಟರ್ ಸಿಸ್ಟಂ ಹೋರು ಆಗುತ್ತಿತ್ತು. ಅದನ್ನು ರಿಪೇರಿ ಮಾಡಿದ್ದರಿಂದ ವಾಟರ್ ಸಿಸ್ಟಂ ಉಳಿದಿದೆ. ಲಿಂಕ್ ಕೆನಾಲ್ ಮತ್ತು ಟನಲ್ ರಿಪೇರಿ ಕೆಲಸ ಮಾಡಲಾಗಿದೆ. ಬುಗಾ ಬಹಳ ಮುಖ್ಯವಾದ ನಾಲಾ ಕೆಲಸ ಅದನ್ನು ಮುಗಿಸಿದ್ದೇವೆ. ಮಾರ್ಚಿ 30ಕ್ಕೆ ನೀರು ಕೊಡಬೇಕೆಂದು ಮಂಡ್ಯ ಜಿಲ್ಲೆಯಲ್ಲಿ ಹುಲಿಕೆರೆ ಮತ್ತು ಬಾದಗಲ್ ಕೆಲಸ

ಮಾಡಿದ್ದೇವೆ ಎಂದು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಬಿಜಾಪುರ ಎಕ್ಸ್‌ಲೇಟರ್ ಚಾನೆಲ್ 20 ಕೋಟಿ ರೂಪಾಯಿ ಕೆಲಸ, ನಂಜಾಪುರದ ಲಿಫ್ಟ್ ಇರಿಗೇಷನ್ 22 ಕೋಟಿ ರೂಪಾಯಿ, ಪೂರಿಗಾಲಿ 34 ಕೋಟಿ ರೂಪಾಯಿ ಕೆಲಸ ಹೊಸಹೊಳಲುವಿನ ಪಿಕಪ್ ನಾಲಾ ಏಳೂವರೆ ಕೋಟಿ ರೂಪಾಯಿ, ತೊಣ್ಣೂರು ಕೆರೆ ಆಧುನೀಕರಣಕ್ಕೆ 9 ಕೋಟಿ ರೂಪಾಯಿ, ಶಿಂಷಾ ಆಧುನೀಕರಣಕ್ಕೆ 15 ಕೋಟಿ ರೂಪಾಯಿ. ಕೆಆರ್‌ಎಸ್ ಲೋಯರ್ ಲೆವೆಲ್‌ನಲ್ಲಿ 10 ಕೋಟಿ . ರೂಪಾಯಿ, 5 ಕೋಟಿ ರೂಪಾಯಿ ಮೇಜರ್ ಲೈಟಿಂಗ್ ಕಾರ್ಯಕ್ರಮವನ್ನು ಕೆಆರ್‌ಎಸ್‌ನಲ್ಲಿ ಮಾಡಿಕೊಟ್ಟಿದ್ದೇವೆ. ಆಧುನೀಕರಣ ಕಾರ್ಯಕ್ರಮದಡಿಯಲ್ಲಿ ಮಂಡ್ಯ ಜಿಲ್ಲೆಯಲ್ಲಿ 18 ಏತನೀರಾವರಿ ಕೆಲಸಗಳನ್ನು ಮಂಜೂರು ಮಾಡಿ ಏಳು ಪ್ರಾರಂಭವಾಗಿದೆ. ಉಳಿದವುಗಳು ಈ ವರ್ಷ ಪ್ರಾರಂಭವಾಗುತ್ತವೆ. ಇದರಲ್ಲಿ ನನ್ನ ತಾಲ್ಲೂಕಿನ ಬೋಗಾಧಿ ಲಿಫ್ಟ್ ಇರಿಗೇಷನ್ ಏಳೂವರೆ ಕೋಟಿ ರೂಪಾಯಿ ಮಂಜೂರು ಮಾಡಿಸಿಕೊಂಡಿದ್ದೇನೆ. ಕದಬಳ್ಳಿ ಲಿಫ್ಟ್ ಇರಿಗೇಷನ್ 10-15 ವರ್ಷಗಳಿಂದ ಕೇಳುತ್ತಿದ್ದೆವು. ಕದಬಳ್ಳಿ ಲಿಫ್ಟ್ ಇರಿಗೇಷನ್‌ಗೆ ಐದು ಕೋಟಿ ರೂಪಾಯಿ ಮಂಜೂರಾತಿಯನ್ನು ಪಡೆದಿದ್ದೇವೆ. ಇಗ್ಗಲೂರು ಪ್ರಾಜೆಕ್ಟ್ 1969ರಲ್ಲಿ ಪ್ರಾರಂಭವಾಗಿತ್ತು, ಇದುವರೆಗೆ ಯಾರು ಮಾಡಿರಲಿಲ್ಲ, ಈ ಸರ್ಕಾರ ಮಾಡಿತು ಎಂದು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. 800 ಎಕರೆಗೆ ನೀರು ಕೊಟ್ಟಿದ್ದೇವೆ. ನಾಲ್ಕು ಏತನೀರಾವರಿ ಎ ಅಂಡ್ ಬಿ ಮುಗಿದಿದೆ. ಸಿ ಅಂಡ್ ಡಿ ಕೆಲಸ ನಡೆಯುತ್ತಿದೆ. ಮದ್ದೂರು, ಮಳವಳ್ಳಿ, ಸಾತನೂರು, ಚನ್ನಪಟ್ಟಣ ಈ ನಾಲ್ಕು ತಾಲ್ಲೂಕುಗಳಿಗೆ ಅನುಕೂಲವಾಗುತ್ತದೆ. ಇವತ್ತು ಚನ್ನಪಟ್ಟಣ ತಾಲ್ಲೂಕು ಯಮಕಳ್ಳಿ ಏತನೀರಾವರಿ ಪ್ರಾಜೆಕ್ಟ್ ಮಂಜೂರಾಗಿ 15 ಕೋಟಿ ರೂಪಾಯಿ ಕೆಲಸ ಪ್ರಾರಂಭವಾಗಿದೆ. ನಿಟ್ಟೂರು ಏತ ನೀರಾವರಿ ಯೋಜನೆಗೆ 7 ಕೋಟಿ ರೂಪಾಯಿ ಮಂಜೂರಾಗಿ 70 ಪರ್ಸೆಂಟ್ ಕೆಲಸ ಮುಗಿದಿದೆ. ಇನ್ನು 30 ಪರ್ಸೆಂಟ್ ಕೆಲಸ ಆಗಬೇಕಾಗಿದೆ. ಮಂಚನಬೆಲೆ ಅರ್ಕಾವತಿ ಡ್ಯಾಮ್ ಕೆಲಸ ಪ್ರಾರಂಭ ಮಾಡಿದ್ದೇವೆ. ರೈತರ ಸಮಸ್ಯೆಗಳನ್ನು ಬಗೆಹರಿಸಲಿಕ್ಕೆ ಕೆಲಸ ಪ್ರಾರಂಭ ಮಾಡಲಾಗಿದೆ. ಎರಡು ಸಾವಿರ ಕೋಟಿ ರೂಪಾಯಿ ಹಣವನ್ನು ನಮಗೆ ಕೊಡಿ ನಮ್ಮ ಕಾವೇರಿ ಬೇಸಿನ್‌ಗೆ ಹೆಚ್ಚು ಹಣವಿಲ್ಲ ಅರ್ಧಂಬರ್ಧ ಕೆಲಸಗಳಾಗಿವೆ ಹೆಚ್ಚಿಗೆ ಹಣ ಕೊಡಿಯೆಂದು ಗಲಾಟೆ ಮಾಡಿದಾಗ ಕೇವಲ 300 ಕೋಟಿ ರೂಪಾಯಿ ಕೊಡುತ್ತಿದ್ದಾರೆ. 300 ಕೋಟಿ ರೂಪಾಯಿ ಕೊಟ್ಟರೆ ಆಗುವುದಿಲ್ಲ. ಆದ್ದರಿಂದ ನೀರಾವರಿ ಹಣಕಾಸು ನಿಗಮ ಮಾಡಿ ಹಣವನ್ನು ಸಂಗ್ರಹ ಮಾಡಿ ನಮ್ಮ ರಾಜ್ಯದಲ್ಲಿ ನೀರಾವರಿ ಬಾಂಡ್‌ಗಳ ಮೂಲಕ ಹಣವನ್ನು ಎತ್ತುವುದಕ್ಕೆ ಸಫಲರಾಗಿದ್ದೇವೆ. ಕೃಷ್ಣ ಜಲಭಾಗ್ಯ ನಿಗಮ, ಕಾವೇರಿ ಜಲಭಾಗ್ಯ ನಿಗಮ ಎರಡೂ ನಿಗಮಗಳಲ್ಲಿ ಹಣ ಎತ್ತುವ ಕೆಲಸ ಸೂಸೂತ್ರವಾಗಿ ನಡೆದಿದೆ. ಮಹಾರಾಷ್ಟ್ರದಂತಹ ದೊಡ್ಡ ರಾಜ್ಯದಲ್ಲಿ ನೀರಾವರಿ ಬಾಂಡುಗಳ ಮೂಲಕ ಹಣ ಸಂಗ್ರಹ ಮಾಡಲಿಕ್ಕೆ ಆಗಲಿಲ್ಲ. ಬೊಂಬಾಯಿಯಲ್ಲಿ ಹಣಕಾಸಿನ ಚಟುವಟಿಕೆ

ಹೆಚ್ಚು ಅಲ್ಲಿ ಹಣ ಕ್ರೋಢೀಕರಿಸಲಿಕ್ಕೆ ಆಗಲಿಲ್ಲ. ಆದರೆ ನಮ್ಮ ರಾಜ್ಯದ ಜನತೆ ನಮ್ಮ ಸರ್ಕಾರದ ಮೇಲೆ ನಂಬಿಕೆಯಿಟ್ಟು ಸರ್ಕಾರದ ಪರವಾಗಿರತಕ್ಕ ನೀರಾವರಿ ಬಾಂಡ್‌ಗಳನ್ನು ಕೊಂಡು ಇವತ್ತು ಹಣ ವ್ಯವಸ್ಥಿತವಾಗಿ ಆಗುತ್ತಿವೆ. ಆದ್ದರಿಂದ ಕಾವೇರಿ ಜಲಾನಯನ ಹಣಕಾಸಿನ ನಿಗಮ ಮಾಡಿ ಎರಡು ಸಾವಿರ ಕೋಟಿ ರೂಪಾಯಿಗಳನ್ನು ಕ್ರೋಢೀಕರಣ ಮಾಡಲಿಕ್ಕೆ ಸಾಧ್ಯವಾಯಿತು ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅದೇ ರೀತಿಯಲ್ಲಿ ಕಬಿನಿಯ ಸೆಕೆಂಡ್ ಸ್ಟೇಜ್ ತೆಗೆದುಕೊಂಡು ಆಧುನೀಕರಣದಲ್ಲಿ ಏನೇನು ಮಾಡಲಾಗಿದೆಯೆಂದು ಹೇಳುತ್ತೇನೆ.

ಅಧ್ಯಕ್ಷರು :— ಇರಿಗೇಷನ್ ಸಾಕು. ಬರೀ ನಾಗೇಗೌಡರು ಹೇಳಿದಿರಿ, ಗೋವಿಂದೇಗೌಡರದು ಹೇಳುವುದಿಲ್ಲವೆ?

ಶ್ರೀ ಕಾಗೋಡು ತಿಮ್ಮಪ್ಪ :— ನೀರಾವರಿ ಬಾಂಡುಗಳ ಮುಖಾಂತರ ಹಣ ಸಂಗ್ರಹ ಮಾಡಲಾಗಿದೆಯೆಂದು ಹೇಳಿದಿರಿ. ಸಾರ್ವಜನಿಕರಿಂದ ಬಂದಂತಹ ಹಣವೆಷ್ಟು? ಸರ್ಕಾರದ ಸಂಸ್ಥೆಗಳಾದ ನಿಗಮ ಬ್ಯಾಂಕುಗಳಿಂದ ಎಷ್ಟು ಬಂತೆಂದು ಹೇಳಿ ನೋಡೋಣ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಬಾಂಡುಗಳಿಗೆ ಮತ್ತು ಬ್ಯಾಂಕುಗಳು ಹಾಕಿದವು. ಆದರೆ ನಿಗಮ ಪ್ರಾರಂಭ ಮಾಡಿ ಆ ಕೆಲಸ ನೀವು ಮಾಡಲಿಲ್ಲವಲ್ಲಾ, ಸ್ವಾಮಿ.

ಶ್ರೀ ಕಾಗೋಡು ತಿಮ್ಮಪ್ಪ :— ನೀವು ಮಾತನಾಡುವಾಗ ಭಾಗೀರಥಿ ತರಹ ಹರಿದು ಬಂದು ಅಂದಿರಲ್ಲಾ ಅದಕ್ಕೆ ಯಾವ ಜನ ಕೊಟ್ಟಿದ್ದಾರೆಂದು ಹೇಳಿಯೆಂದು ಕೇಳಿದೆ.

6.40 ಪಿ.ಎಂ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಅದನ್ನೇ ಭಗೀರಥ ಪ್ರಯತ್ನ ಅನ್ನುವುದು. ಈ ಭಗೀರಥ ಪ್ರಯತ್ನವನ್ನು ನೀವು ಮಾಡಲಿಲ್ಲವಲ್ಲಾ. ನಿಮ್ಮಿಂದ ಆಗಲಿಲ್ಲ ಅಥವಾ ನಿಮ್ಮ ಪ್ರಯತ್ನ ಸಫಲವಾಗಲಿಲ್ಲವೋ ಹೇಗೆ? ಒಳ್ಳೆಯ ಘಳಿಗೆ ನಿಮಗೆ ಕೂಡಲಿಲ್ಲವೇ ಎಂದು ನಾನು ಹೇಳುತ್ತಿರುವುದು.

ಶ್ರೀ ಕಾಗೋಡು ತಿಮ್ಮಪ್ಪ :— ಕೃಷ್ಣಾ ಜಲಭಾಗ್ಯ ನಿಗಮ ಯಾವಾಗ ಆದದ್ದು?

ಶ್ರೀ ಎಲ್.ಆರ್. ಶಿವರಾಮೇಗೌಡ :— ನೀವು ಯಾವಾಗಲಾದರೂ ಮಾಡಿ. ದುಡ್ಡು ಬಂದಿದ್ದು ಈಗ. ಅದನ್ನು ನೀವು ಏಕೆ ಮಾಡಲಿಲ್ಲ? ಕೃಷ್ಣ ಜಲಭಾಗ್ಯ ನಿಗಮವನ್ನು ಬಹಳ ಹಿಂದೆ ಮಾಡಿದ್ದು ಅಂತ ನಾನು ಒಪ್ಪಿಕೊಳ್ಳುತ್ತೇನೆ.

ಅಧ್ಯಕ್ಷರು :— ಶಿವರಾಮೇಗೌಡರೇ, ಗಂಗೆ ಹಾಗೆ ಎಲ್ಲರಿಗೂ ಬಗ್ಗುವುದಿಲ್ಲ. ಆದಕ್ಕೇ ಅವರು ಭಗೀರಥ ಪ್ರಯತ್ನ ಮಾಡಲಿಲ್ಲ. ನೀವು ಮುಂದುವರೆಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಸನ್ಮಾನ್ಯ ಅಧ್ಯಕ್ಷರೇ, ಅವರು ಮಾಡಲೊಲ್ಲರು.

ಅಧ್ಯಕ್ಷರು :— ನಾನು ಅದನ್ನೇ ಹೇಳಿದ್ದು. ಗಂಗೆ ಹಾಗೆ ಎಲ್ಲರಿಗೂ ಬಗ್ಗುವುದಿಲ್ಲ, ಕೆಲವರಿಗೆ ಬಗ್ಗುತ್ತಾಳೆ. ನೀವು ಭಗೀರಥ ಪ್ರಯತ್ನ ಮಾಡಿದ್ದೀರಿ, ಸಾಧಿಸಿದ್ದೀರಿ. ಮುಂದುವರೆಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಸಭಾಧ್ಯಕ್ಷರೇ, ನಾನು ಒಂದು ಮಾತನ್ನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ನಿಜ, ನಾವು ಸರ್ಕಾರದ ಸಾಧನೆಗಳನ್ನು ಹೇಳುವುದಕ್ಕೆ ಹೊರಟಾಗ ಹೇಳಬೇಕಾಗುತ್ತದೆ. ಸಾಧನೆ ಮಾಡದಿದ್ದರೆ ಹೇಳುತ್ತೇವಾ? ಈಗ ಖರ್ಗೆ ಸಾಹೇಬರು ಹೇಳಲಿ. ಐದುವರ್ಷ ನಿಮ್ಮ ಸರ್ಕಾರ ಇಲ್ಲಿ ಇದ್ದಾಗ ನೀವು ಏನೂ ಕೆಲಸ ಮಾಡಲಿಲ್ಲ ಎನ್ನತಕ್ಕಂಥ ಮಾತನ್ನು ನಾವು ಹೇಳುವುದಿಲ್ಲ. ನಿಮ್ಮ ಕಾಲದಲ್ಲೂ ಸಾಧನೆಯಾಗಿದೆ. ಆಧರೆ ನಿಮ್ಮ ಕಾಲದಲ್ಲಿ ಆಗಿರುವ ಸಾಧನೆಯನ್ನೂ ನನ್ನ ಕೈಯಲ್ಲಿ ಇಲ್ಲಿ ನಿಲ್ಲಿಸಿಕೊಂಡು ಹೇಳಿಸಿದ್ದೀರಲ್ಲಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ :— ನಮ್ಮ ಕಾಲದಲ್ಲಿ ನೀವೇನೂ ಕೆಲಸ ಮಾಡಿಸಿಕೊಂಡಿಲ್ವಾ? ಕೆಲಸ ಮಾಡಿಸಿಕೊಂಡಿದ್ದು ಹೇಳಿದ್ದೀರಿ. ನಮ್ಮ ಚಿಂತೆ ಏನು ಎಂದರೆ ನೀವು ಬರೀ ದೇವೇಗೌಡರು, ನಾಗೇಗೌಡರ ಬಗ್ಗೆ ಹೇಳುತ್ತೀರಿ. ಇಲ್ಲಿ ಬಚ್ಚೇಗೌಡರು ಇದ್ದಾರೆ, ಗೋವಿಂದಗೌಡ ಇದ್ದಾರೆ, ಅಶ್ವಥರೆಡ್ಡಿಯವರು ಇದ್ದಾರೆ ಅವರುಗಳ ಬಗ್ಗೆ ಹೇಳಲಿಲ್ಲ. ಮುಖ್ಯಮಂತ್ರಿಗಳ ಬಗ್ಗೆಯೂ ಹೇಳಿಲ್ಲ. ಯಾವಾಗಲೂ ಬೈರೇಗೌಡರು, ನಾಗೇಗೌಡರು ಎಂದು ಹೇಳುತ್ತೀರಿ.

ಶ್ರೀವಾಟಾಳ್ ನಾಗರಾಜ್ :— ಅವರ ಆಕ್ಷೇಪಣೆ ಏನು ಎಂದರೆ ನೀವು ಬರೀ ಬೈರೇಗೌಡರು, ನಾಗೇಗೌಡರ ಬಗ್ಗೆ ಮಾತ್ರ ಮಾತನಾಡುತ್ತಿದ್ದೀರಿ. ಈಗ ಗೋವಿಂದೇಗೌಡರು ಕುಳಿತಿದ್ದಾರೆ. ಎಸ್.ಎಸ್. ಪಾಟೀಲರು ಕುಳಿತಿದ್ದಾರೆ. ಅವರ ಬಗ್ಗೆ ನೀವು ಏನೂ ಹೇಳುತ್ತಿಲ್ಲ ಎಂದು.

ಶ್ರೀ ಸಿ. ಬೈರೇಗೌಡ :— ಬೇರೆ ವಿಚಾರ ಹೇಳುವುದಕ್ಕೆ ನೀವು ಅವಕಾಶವನ್ನೇ ಅವರಿಗೆ ಕೊಡುತ್ತಿಲ್ಲ. ದಯವಿಟ್ಟು ಅವರಿಗೆ ಅವಕಾಶ ಕೊಡಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನಾನು ಮೊನ್ನೆ ಗೋವಿಂದೇಗೌಡರ ಇಲಾಖೆ ಬಗ್ಗೆ ಮಾತನಾಡಿದ್ದೇವೆ, ರೇವಣ್ಣನವರ ಬಗ್ಗೆ ಮೊನ್ನೆ ಮಾತನಾಡಿದ್ದೇನೆ. ಪ್ರಾರಂಭಮಾಡುವಾಗ ಕೃಷಿ ಇಲಾಖೆ ಬಗ್ಗೆ ಮಾತನಾಡಿ ಇವತ್ತು ಮುಗಿಸಿದ್ದೇನೆ. ಈಗ ನೀರಾವರಿ ಬಗ್ಗೆ ಪ್ರಾರಂಭಮಾಡಿ ಈಗ ಮುಗಿಸುತ್ತಿದ್ದೇನೆ. ಹೀಗೆ ನನಗೆ ಅವಕಾಶ ಕೊಟ್ಟರೆ ನಾಲ್ಕರಿಂದ ಐದು ದಿವಸ ಬೇಕು ಸ್ವಾಮಿ.

ಅಧ್ಯಕ್ಷರು :— ನೀವು ಕೃಷ್ಣಮೆನನ್‌ಗಿಂತ ದೊಡ್ಡವರು ಎಂಬುದು ನನಗೆ ಗೊತ್ತಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಇಲ್ಲದಿದ್ದರೆ ನನಗೆ ಟೈಮ್ ನಿಗದಿ ಮಾಡಿಬಿಡಿ.

ಅಧ್ಯಕ್ಷರು :— ಇಲ್ಲ, ನೀವು ಮಾತನಾಡಿ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ :— ಹನ್ನೊಂದನೇ ಅಸೆಂಬ್ಲಿಗೂ ತಾವೇ ಅಧ್ಯಕ್ಷರಾಗಿರಬೇಕು ಎಂದು ಹೇಳ್ತಿದ್ದಾರೆ ನೋಡಿ. ಎಷ್ಟು ತೀಟೆ ಮಾಡುತ್ತಿದ್ದಾರೆ. ಇದು ತಮಗೆ ಅರ್ಥವಾಗಿರಬೇಕು.

ಅಧ್ಯಕ್ಷರು :— ನನ್ನದೇನು ತೀರ್ಮಾನ ಎಂಬುದನ್ನು ನಾನು ಮೊನ್ನೆಯೇ ಹೇಳಿಬಿಟ್ಟಿದ್ದೇನೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— 11ನೇ ವಿಧಾನಸಭೆಗೂ ಸಹಿತ ತಾವೇ ಅಧ್ಯಕ್ಷರಾಗಿ ಮುಂದುವರೆಯಬೇಕು. ನಾನು ಇದನ್ನು ಪ್ರಾರ್ಥನೆ ಮಾಡುತ್ತೇನೆ.

ಅಧ್ಯಕ್ಷರು :— ಧನ್ಯವಾದಗಳು

ಶ್ರೀ ವಾಟಾಳ್ ನಾಗರಾಜ್ :— ನೀವು ಯಾರಿಗೆ ಕೈಮುಗಿಯುತ್ತಿದ್ದೀರಿ?

ಅಧ್ಯಕ್ಷರು :— ಬೈರೇಗೌಡರ ಮುಖಾಂತರ ಅವರಿಗೆ.

ಶ್ರೀ ವಾಟಾಳ್ ನಾಗರಾಜ್ :— ನಾವು ಬಿಡುವುದಿಲ್ಲ. ಬೇಕಾದದ್ದು ಆಗಿ ಹೋಗಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಎಷ್ಟು ಕೆಲಸ ಆಗಿದೆ ಎಂದು ಹೇಳುವುದಾದರೆ ಮಾನ್ಯ ಅಧ್ಯಕ್ಷರೇ, ಬೆಳಗಾವಿ ಜಿಲ್ಲೆಯಲ್ಲಿ ಮಾರ್ಕಂಡೇಯ ಯೋಜನೆ ಮಂಜೂರಾಗಿ ನಮ್ಮದೇ ಕಾಲದಲ್ಲಿ ಕೆಲಸ ಪ್ರಾರಂಭಮಾಡಿದ್ದೇವೆ. ಇದು 137 ಕೋಟಿ ರೂಪಾಯಿಗಳ ಯೋಜನೆ. ಗೋಕಾಕ್ ತಾಲ್ಲೂಕಿನ ಹರಿಮಾಲಾಗೆ ಮಂಜೂರಾತಿ ಕೊಟ್ಟು 26 ಕೋಟಿ ರೂಪಾಯಿಗಳ ಕೆಲಸ ಪ್ರಾರಂಭ ಮಾಡಿದ್ದೇವೆ. ಸಿಂಲೂರ 40ಕೋಟಿ ರೂಪಾಯಿಗಳ ಕೆಲಸ ಪ್ರಾರಂಭ ಮಾಡಿದ್ದೇವೆ. ಘಟಪ್ರಭಾ ಮೂರನೇ ಹಂತ, ಮಲಪ್ರಭಾ ರೇಣವರೆಗೆ ಚಾನಲ್ ತೆಗೆದು ಕೆಲಸ ಪ್ರಾರಂಭ ಮಾಡಿದ್ದೇವೆ. ಹತ್ತು-ಹದಿನೈದು ವರ್ಷಗಳಿಂದ ಚಾನಲ್ ಕಟ್ಟಿದ್ದರೂ ರೈತರಿಗೆ ನೀರು ಕೊಟ್ಟಿರಲಿಲ್ಲ. ಈಗ ನೀರು ಕೊಡತಕ್ಕಂಥ ಕೆಲಸ ಮಾಡಿದ್ದೇವೆ. ತುಂಗಾ ಮೇಲ್ದಂಡೆ -ಗಾಜನೂರು ಡ್ಯಾಮ್ ಕಟ್ಟಿ 100 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಂಜನಾಪುರ,

ಸನ್ಯಾಸಿಕೊಪ್ಪ ಪ್ರಾರಂಭ ಆಗಿದೆ. ಟೆಕ್ನಿಕಲ್ ಕೆಲಸ ಎಲ್ಲಾ ಮುಗಿದಿದೆ. ಭದ್ರಾ ಆಧುನೀಕರಣಕ್ಕೆ ನೂರು ಕೋಟಿ ರೂಪಾಯಿ ಮಂಜೂರಾಗಿದ್ದು ಈ ವರ್ಷ ಕೆಲಸ ಪ್ರಾರಂಭ ಮಾಡಬೇಕು. ದಾವಣಗೆರೆ, ಶಿವಮೊಗ್ಗಕ್ಕೆ ಇದರಿಂದ ಅನುಕೂಲವಾಗುತ್ತದೆ. ತುಂಗಾ ಲೆಫ್ಟ್ ಬ್ಯಾಂಕ್ ಚಾನಲ್‌ನಿಂದ ಆಧುನೀಕರಣದ ಕೆಲಸ ಏಪ್ರಿಲ್ 10ರಿಂದ ಕೆಲಸ ಪ್ರಾರಂಭ ಮಾಡಬೇಕು. ನೂರು ಕೋಟಿ ರೂಪಾಯಿಗಳ ಕಾರ್ಯಕ್ರಮ ಎರಡು ವರ್ಷಗಳಲ್ಲಿ ಮುಗಿಯುತ್ತದೆ.

ಶ್ರೀ ಯು.ಬಿ. ಬಣಕಾರ್ :— ಮಾನ್ಯ ಸಭಾಧ್ಯಕ್ಷರೇ, ತುಂಗಾ ಮೇಲ್ದಂಡೆ ಯೋಜನೆಗೆ ನೂರು ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ ಎಂದು ಹೇಳುತ್ತಿದ್ದಾರೆ. ಆದರೆ ಇದುವರೆಗೂ 24 ಕೋಟಿ ಮಾತ್ರ ಖರ್ಚಾಗಿದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನೂರು ಕೋಟಿ ರೂಪಾಯಿಗಳ ಕಾರ್ಯಕ್ರಮ ಎಂದು ನಾನು ಹೇಳಿದ್ದೇನೆ.

ಶ್ರೀ ಯು.ಬಿ. ಬಣಕಾರ್ :— ಈ ವರ್ಷ ನಾಲ್ಕೂವರೆ ಕೋಟಿ ರೂಪಾಯಿ ನಿಗದಿ ಮಾಡಿ ಒಂದು ಕೋಟಿ 75 ಲಕ್ಷ ರೂಪಾಯಿಗಳ ಬಿಲ್ ಬಾಕಿ ಇದೆ. ಒಂದು ವರ್ಷದಿಂದ ಇವರ ಕೈಯಿಂದ ಈ ಬಿಲ್ ಪಾವತಿ ಮಾಡುವುದಕ್ಕೆ ಆಗಲಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನಾನು ಹೇಳಿದ್ದು 100 ಕೋಟಿ ರೂಪಾಯಿಗಳ ಯೋಜನೆಯ ಕೆಲಸ ಪ್ರಾರಂಭ ಆಗಿದೆಯೆಂದು. ನೂರೂ ಕೋಟಿ ರೂಪಾಯಿ ಖರ್ಚಾಗಿದೆ ಎಂದು ನಾನು ಹೇಳಿಲ್ಲ. ಗುಲ್ಬರ್ಗಾ ಜಿಲ್ಲೆಯಲ್ಲಿ ಗಂಡೂರಿನಾಲಾ ಕೆಲಸ 27 ಕೋಟಿ ರೂಪಾಯಿಗಳಲ್ಲಿ ಪ್ರಾರಂಭವಾಗಿದೆ. ಚುರುಕಿನಾಲದಲ್ಲಿ ರೈತರಿಗೆ ನೀರು ಕೊಟ್ಟಿದ್ದೇವೆ.

ಅಧ್ಯಕ್ಷರು :— ಗಂಡೂರಿನಾಲಾದ್ದು ಎಷ್ಟು ಆಗಿದೆ?

ಶ್ರೀ ಎಲ್.ಆರ್. ಶಿವರಾಮೇಗೌಡ :— 27 ಕೋಟಿ ರೂಪಾಯಿಗಳ ಕೆಲಸ ಪ್ರಾರಂಭ ಮಾಡಿದ್ದೇವೆ. ಈ ಯೋಜನೆ 27 ಕೋಟಿ ರೂಪಾಯಿಗಳದ್ದು.

ಅಧ್ಯಕ್ಷರು :— ನಿಮ್ಮ ಮಂತ್ರಿಗಳು ಇಲ್ಲೇ ಇದ್ದಾರೆ. ಈ ಕೆಲಸ ಮಾಡಿದವರಿಗೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಕೆ.ಎನ್. ನಾಗೇಗೌಡ :— ಗಂಡೂರಿನಾಲದ್ದು ಯಾವ ಜಿಲ್ಲೆಗೂ ಹಣ ಕೊಟ್ಟಿಲ್ಲ. ಆದರೆ ಸುಮಾರು ಐದಾರು....

ಅಧ್ಯಕ್ಷರು :— ಹಣ ಕೊಡುವುದು ಅಲ್ಲ ಇವತ್ತಿಗೂ ನೀವು ಬಜೆಟ್ ಪ್ರಾವಿಜನ್ ಮಾಡಿಲ್ಲ.

ಶ್ರೀ. ಕೆ.ಎನ್. ನಾಗೇಗೌಡ :— ಬಜೆಟ್ ಪ್ರಾವಿಜನ್ ಮಾಡಲಿಲ್ಲ, ನಿಜ but we have completed the work nearly Rs.10 crores work has been turned out.

ಅಧ್ಯಕ್ಷರು :— ಹತ್ತು ಕೋಟಿ ಅಲ್ಲ. ಅವರು ಪಾಪ 15 ಕೋಟಿದ್ದು ಮಾಡಿದ್ದಾರೆ. ಆದರೆ ಇವತ್ತು ನೀವು ಬಜೆಟ್ ಪ್ರಾವಿಜನ್ನೇ ಮಾಡಿಲ್ಲ. ದುಡ್ಡೂ ಕೊಟ್ಟಿಲ್ಲ.

ಶ್ರೀ ಎಲ್.ಆರ್ ಶಿವರಾಮೇಗೌಡ :— ಮಸ್ಕಿ ನಾಲಾ 30 ಕೋಟಿ ರೂಪಾಯಿಗಳ ಯೋಜನೆ ಕೆಲಸ ಮುಗಿಯುವ ಹಂತಕ್ಕೆ ಬಂದಿದೆ. ಬೆಣ್ಣೆತೊರೆ 1972ರಲ್ಲಿ ಮಂಜೂರು ಆದದ್ದು....

ಅಧ್ಯಕ್ಷರು :— ಬಜೆಟ್ ಪ್ರಾವಿಜನ್ ಮಾಡುವುದಕ್ಕೆ ನಿಮ್ಮಲ್ಲಿ ಕ್ರೈಟೇರಿಯಾ ಏನು?

ಶ್ರೀ ಕೆ.ಎನ್. ನಾಗೇಗೌಡ :— ತಮಗೆ ಗೊತ್ತಿರುವ ಹಾಗೆ ನಬಾರ್ಡ್‌ನಿಂದ ತೆಗೆದುಕೊಂಡಿರತಕ್ಕಂಥ ಆರು ಯೋಜನೆಗಳಿಗೆ ನಾವು ನಬಾರ್ಡ್ ಪ್ರಾವಿಜನ್ ಮಾಡಲೇಬೇಕು. ಏಕೆಂದರೆ ಈ ಎಲ್ಲಾ ಪ್ರಾಜೆಕ್ಟ್‌ಗಳನ್ನು AIBP groupನಲ್ಲಿ ಕಂಪ್ಲೀಟ್ ಮಾಡಬೇಕು. ಬಜೆಟ್ ಇಂಥಾದ್ದಕ್ಕೆ ಪ್ರಾವಿಜನ್ ಮಾಡಬೇಕು. 50: 50 ಸೆಂಟ್ರಲ್ ಗವರ್ನಮೆಂಟದ್ದು ಇದು ಮಾಡಿದ್ದೇವೆ ಇನ್ನು ಉಳಿದಿರತಕ್ಕಂಥ ಗಂಡೋರಿ ನಾಲಾ ಇದರಲ್ಲಿ ಸೇರಿಲ್ಲ. ಅದು ಒಂದು ಕಡೆ AIBP group ನಲ್ಲಿ ಸೇರಿಲ್ಲ, ಈ ಕಡೆ ನಬಾರ್ಡಿಗೂ ಸೇರಿಲ್ಲ. ಮೂರನೇಯದು ಈಗ ನಾವು ನಿಗಮ ಮಾಡಿದ್ದು ಅದರಲ್ಲಿ 6 ಪ್ರಾಜೆಕ್ಟ್‌ಗಳನ್ನು ತೆಗೆದುಕೊಡಿದ್ದೇವೆ. even there also it is not included.. ಈ ಸಾರಿ ಸ್ಪೆಷಲ್ ಪ್ರಾವಿಜನ್ ಅನ್ನು ಖಂಡಿತವಾಗಿಯೂ ಮಾಡುತ್ತೇವೆ.

ಅಧ್ಯಕ್ಷರು :— ಮಂದುವರೆಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಬೆಣ್ಣೆತೊರೆ 1972 ರಲ್ಲಿ ಮಂಜೂರಾದದ್ದು ಇದುವರೆಗೂ ಕೆಲಸ ಪ್ರಾರಂಭ ಆಗಿರಲಿಲ್ಲ 50 ಕೋಟಿ ರೂಪಾಯಿಗಳ ಕೆಲಸ ಈಗ ಪ್ರಾರಂಭವಾಗಿದೆ. ಡ್ಯಾಮ್ ಕೆಲಸ ಮುಗಿದಿದೆ. ಲೋಯರ್ ಮುಲ್ಲಾ ಮತ್ತು ಅಮರಜಾ ಕೆಲಸ ಪ್ರಾರಂಭವಾಗಿದೆ. ಅದು ಮುಗಿಯುವ ಹಂತಕ್ಕೂ ಬಂದಿದೆ ಕಾರಂಜಾ - ಎರಡು ಸೇತುವೆಗಳನ್ನು ಮುಗಿಸಿದ್ದಾರೆ. 15 ಸಾವಿರ ಎಕರೆಗೆ ನೀರು ಕೊಡಲಾಗಿದೆ.

ಶ್ರೀ ಸೈಯದ್ ಜುಲ್ಫೀಕರ್ ಹಷ್ಮಿ :— ನೀರು ಕೊಡುತ್ತಿಲ್ಲ.

ಅಧ್ಯಕ್ಷರು :— ನೀರು ಬಿಡುತ್ತಾ ಇದ್ದಾರೆ, ಕೊಡುವುದಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಸಭಾಧ್ಯಕ್ಷರೇ, ಇದು ರೆಕಾರ್ಡಿಗೆ ಹೋಗಲಿ. 15 ಸಾವಿರ ಎಕರೆಗೆ ನಾವು ನೀರು ಕೊಟ್ಟಿದ್ದೇವೆ. ಇವರು ಆ ಊರನ್ನು ನೋಡಿಯೇ ಇಲ್ಲ. ಅವರು ಬರೀ ಬೆಂಗಳೂರಿನಲ್ಲೇ ಇದ್ದಾರೆ. ಇವರಿಗೆ ಎಷ್ಟು ಸಾವಿರ ಎಕರೆ ಅಂತಲೇ ಗೊತ್ತಿಲ್ಲ. ಆದರೆ ಒಂದು, ಮಾನ್ಯ ಈಶ್ವರಪ್ಪನವರೇ, ಇಷ್ಟೆಲ್ಲಾ ಸಾಧನೆಗಳನ್ನು ಮಾಡಿದ್ದರೂ ಕೂಡ ನಮ್ಮ ಪಕ್ಷದಲ್ಲಿ ಗಲಾಟೆಯಾಗಿದೆ ಅನ್ನುತ್ತೇವೆ. ಪ್ರಜಾತಂತ್ರ ಇರತಕ್ಕಂಥದ್ದೇ ನಮ್ಮ ಪಕ್ಷದಲ್ಲಿ. ಯಾರೂ ಏನು ಬೇಕಾದರೂ ಮಾಡಬಹುದು, ಯಾರು ಎಲ್ಲಿ ಬೇಕಾದರೂ ಬಯ್ಯಬಹುದು, ಯಾರನ್ನು ಎಲ್ಲಿ ಬೇಕಾದರೂ ಕೀಟಲೆ ಮಾಡಬಹುದು. ಆದರೆ ನಿಮ್ಮ ಪಕ್ಷದಲ್ಲಿ ಒಂದು ಮಾತುಹೇಳಬೇಕಾಗುತ್ತದೆ. ನಿಮ್ಮದು ಗರ್ಭಗುಡಿ ಪಕ್ಷ. ನಮ್ಮ ಗರ್ಭಗುಡಿ ಪಕ್ಷದಲ್ಲಿ...

ಶ್ರೀ ಕೆ.ಎಸ್. ಈಶ್ವರಪ್ಪ :— ಅತ್ಯಂತ ದೊಡ್ಡ...

(ಗೊಂದಲ)

ಶ್ರೀ ಎಲ್.ಆರ್ ಶಿವರಾಮೇಗೌಡ :— ನಾನು ಈಲ್ಡ್ ಆಗಿಲ್ಲ. ಏಕೆ ಈ ಮಾತನ್ನು ನಾನು ಹೇಳುತ್ತಿದ್ದೇನೆ ಎಂದರೆ ಗರ್ಭಗುಡಿ ಪಕ್ಷದಲ್ಲಿ ನಿಮ್ಮಲ್ಲಿ ಮಾತನಾಡುವುದಕ್ಕೆ ಸ್ವಾತಂತ್ರ್ಯ ಇಲ್ಲ, ನಿಮ್ಮಲ್ಲಿ ಪ್ರಜಾ ಪ್ರಭುತ್ವ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :— ಗರ್ಭಗುಡಿ ಎಂದರೆ ಏನು? ನನಗೆ ಅರ್ಥವಾಗುತ್ತಿಲ್ಲ. ಅದನ್ನು ನೀವು ಸ್ಪಷ್ಟಪಡಿಸಬೇಕು. ಯಾವ ಗರ್ಭಗುಡಿ, ಯಾವ ದೇವರು, ಯಾವ ಗರ್ಭ ಅದೆಲ್ಲ ಹೇಳಬೇಕು. ಸುಮ್ಮನೆ ಗರ್ಭಗುಡಿ ಎಂದರೆ ಏನರ್ಥ?

ಶ್ರೀ ಎಲ್.ಆರ್ ಶಿವರಾಮೇಗೌಡ :— ಗರ್ಭಗುಡಿ ಪಕ್ಷ ಎಂದು ನಮ್ಮ ಸನ್ಮಾನ್ಯ ಮುಖ್ಯಮಂತ್ರಿಗಳೇ ಹೇಳಿದರು. ಮಮತಾ ಬ್ಯಾನರ್ಜಿಯವರದ್ದು ತೃಣಮೂಲ ಕಾಂಗ್ರೆಸ್, ಕಾಂಗ್ರೆಸ್‌ನವರದ್ದು ರುಣಮೂಲ ಕಾಂಗ್ರೆಸ್..

ಅಧ್ಯಕ್ಷರು :— ಅಯ್ಯಪ್ಪ, ಮೊನ್ನೆನೇ ಅವರು ಹೇಳಿದ್ದಾರೆ. ಗರ್ಭಗುಡಿ ಎಂದರೆ ಏನು ಅದನ್ನು ಹೇಳಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನಮ್ಮದು ಜಗಳದ ಪಾರ್ಟಿ. ಒಂದೊಂದು ಪಾರ್ಟಿಗೂ ಒಂದೊಂದು ಹೆಸರು ಇದೆ. ಇದಕ್ಕೆ ಗರ್ಭಗುಡಿ ಪಕ್ಷ ಎಂದು ನಾನು ಹೆಸರು ಕಟ್ಟಿದ್ದಲ್ಲ. ಇವತ್ತು ಆ ಪಕ್ಷದಲ್ಲೇ ಇದ್ದವರು ಆ ಪಕ್ಷದಿಂದ....

ಶ್ರೀ ವಾಟಾಳ್ ನಾಗರಾಜ್ :— ನಾವು ನಿಮ್ಮ ಭಾಷಣವನ್ನು ಬಹಳ ಪ್ರೀತಿಯಿಂದ ಕೇಳುತ್ತಿದ್ದೇವೆ. ಗರ್ಭಗುಡಿ ಎಂದರೆ ಏನು? ಅದು ಯಾರು? ಅದರ ಅರ್ಥ ಏನು ಎಂದು ಸ್ವಲ್ಪ ಹೇಳಬೇಕಲ್ಲಾ?

ಶ್ರೀ ಎಲ್.ಆರ್ ಶಿವರಾಮೇಗೌಡ :— ಗರ್ಭಗುಡಿ ಎಂದರೆ ಇವತ್ತು...

ಶ್ರೀ ಸಿ. ಬೈರೇಗೌಡ :— ಸ್ನೇಹಿತರಾದ ಮಾನ್ಯ ವಾಟಾಳ್ ನಾಗರಾಜ್ ಅವರಿಗೆ ಎಲ್ಲಾ ಗೊತ್ತಿದ್ದರೂ ಸಹ ಶಿವರಾಮೇಗೌಡರನ್ನು ಕೇಳುತ್ತಿದ್ದಾರೆ, ಚುಚ್ಚುತ್ತಾ ಇದ್ದಾರೆ. ಗರ್ಭಗುಡಿ ಎಂದರೆ ದೇವಸ್ಥಾನ ಇದೆ, ನಾವು ಯಾರೂ ಈ ದೇಶದಲ್ಲಿ ದೇವಸ್ಥಾನ ಇಲ್ಲ ಎಂದು ಹೇಳುವ ಪ್ರಶ್ನೆ ಇಲ್ಲ. ದೇವಸ್ಥಾನ ಇದೆ. ದೇವಸ್ಥಾನದಲ್ಲಿ ಮುಂದುಗಡೆ ಅಂಗಳ ಇರುತ್ತದೆ. ಮತ್ತು ವರಾಂಡ ಎಲ್ಲಾ ಇರುತ್ತದೆ. ಗರ್ಭಗುಡಿ ಎಂದರೆ ದೇವರ ವಿಗ್ರಹ ಇರುತ್ತದೆ. ಒಳಗಡೆ ಇರತಕ್ಕ ಗರ್ಭಗುಡಿಗೆ ಕೇವಲ ಪೂಜಾರಿಗಳಿಗೆ ಮಾತ್ರ ಪ್ರವೇಶ. ನಿಮಗೂ, ನಮಗೂ ಬೇರೆ ಯಾರಿಗೂ ಪ್ರವೇಶ ಇಲ್ಲ. ಅರ್ಚಕರಿಗೆ ಮಾತ್ರ ಸೀಮಿತವಾಗಿರತಕ್ಕಂಥಾದ್ದು ಗರ್ಭಗುಡಿ.

ಅಧ್ಯಕ್ಷರು :— ಇನ್ನೂ ಸ್ಪಷ್ಟವಾಗಿ ಅರ್ಥವಾಗುವ ಹಾಗೆ ಹೇಳಿ. ನಿಮಗೆ ಏನಾದರೂ ಹೇಳಬೇಕೆಂದು ಅನಿಸಿದರೆ, ಅದನ್ನು ಧೈರ್ಯವಾಗಿ ಹೇಳಬೇಕು. ಇಲ್ಲದೇ ಹೋದರೆ ಸುಮ್ಮನಿದ್ದು ಬಿಡಬೇಕು. ಈಗಾ ಇವರಿ ಗರ್ಭಗುಡಿ ಎಂದರೆ, ನೀವು ವಿವರರಣೆ ಕೊಟ್ಟಿರಿ. ಏನು ವಿವರಣೆ ಎಂಬುದು ನಿಮಗೆ ಗೊತ್ತಿದೆ ಅರ್ಚಕರು ಎಂದರೆ ಅರ್ಥಾತ್ ಮೇಲ್ವರ್ಗದವರು, ಅಥವಾ ಬ್ರಾಹ್ಮಣರು ಮಾತ್ರ ಅಲ್ಲಿ ಇರುತ್ತಾರೆ. ಶೂದ್ರರೆಲ್ಲಾ ಹೊರಗಡೆ ಇರುತ್ತಾರೆ, ಇದನ್ನು ಧೈರ್ಯವಾಗಿ ಏಕೆ ಹೇಳುವುದಿಲ್ಲ?

ಶ್ರೀ ಕೆ.ಎಸ್. ಈಶ್ವರಪ್ಪ :— ಅಧ್ಯಕ್ಷರೇ ಅವರಂತೂ ಹೇಳಲಿಲ್ಲ, ನಿಮ್ಮ ಧೈರ್ಯಕ್ಕಾದರೂ ಮೆಚ್ಚಬೇಕು.

ಅಧ್ಯಕ್ಷರು :— ನನಗೆ ಎಲ್ಲಾ ಸಿದ್ಧಾಂತಗಳ ಪರಿಚಯ ಇದೆ. ಎಲ್ಲಾ ವಿಚಾರಗಳನ್ನೂ ಸ್ವಲ್ಪಮಟ್ಟಿಗೆ ಪ್ರಯತ್ನ ಮಾಡಿ ತಿಳಿದುಕೊಂಡಿದ್ದೇನೆ. ನನ್ನ ತಿಳುವಳಿಕೆಗೆಏನು ಬರುತ್ತದೆ ಅದನ್ನು ಹೇಳುತ್ತೇನೆ. ಅದು ನನ್ನ ಅಭಿಪ್ರಾಯ ಎಂದಲ್ಲ. ಗರ್ಭಗುಡಿ ಎಂದರೆ, ನಮ್ಮ ಸಂಸ್ಕೃತಿಯಲ್ಲಿ ಉವರು ಹೇಳಿದಂತೆ, ದೇವರ ಮೂರ್ತಿಯನ್ನು ಎಲ್ಲಿ ಇಟ್ಟಿರುತ್ತೇವೆ ಅದು. ಗರ್ಭಗುಡಿಗೆ ಸಾಮಾನ್ಯವಾಗಿ ಅರ್ಚಕರ ವಿನಹ ಬೇರೆಯವರಿಗೆ ಪ್ರವೇಶ ಇರುವುದಿಲ್ಲ. ತೀರಾ ಹೆಚ್ಚು ಎಂದರೆ, ಮಡಿವಂತಿಕೆಯನ್ನು ಆಚರಣೆ ಮಾಡತಕ್ಕಂಥ ಬ್ರಾಹ್ಮಣರು ಯಾರಿರುತ್ತಾರೆ, ನಮ್ಮ ಚಾತುರ್ವಣ ಪದ್ಧತಿಯಲ್ಲಿ ಅವರಿಗೆ ಮಾತ್ರ ಪ್ರವೇಶ ಇರುತ್ತದೆ. ದೇವಸ್ಥಾನ ಕಟ್ಟತಕ್ಕಂಥವರು ಶೂದ್ರರು. ಕಟ್ಟತಕ್ಕಂಥವರು ದೇವಸ್ಥಾನದ ಹೊರಗೆ ಇರುತ್ತಾರೆ. ಕಟ್ಟುವಾಗ ಹೊರಗೆ

ಬ್ರಾಹ್ಮಣರು ದೇವರಿಗೆ ಹತ್ತಿರ ಇರುತ್ತಾರೆಂದು ಅದರ ಅರ್ಥ. ಸತ್ಯ ಹೇಳಿದ್ದೇನೆಯೇ ಹೊರತು ನಾನು ಬೇರೆ ಏನನ್ನೂ ಹೇಳಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಈ ಗರ್ಭಗುಡಿ ಪಕ್ಷದಲ್ಲಿ ಈಶ್ವರಪ್ಪನವರಿಗೂ ಸ್ಥಾನ ಇಲ್ಲ, ಹೊರಗಡೆ ನಿಂತುಕೊಳ್ಳಬೇಕು. ಅದಕೊಸ್ಕರವೇ ನಾನು ಈಶ್ವರಪ್ಪನವರ ಕಷ್ಟವನ್ನು ನೋಡಿ ಹೇಳಿದೆ.

ಶ್ರೀ ವಾಟಾಳ್ ನಾಗರಾಜ್ :— ಗರ್ಭಗುಡಿ ಹೊರಗಡೆ ಯಾವಾಗಲೂ ಬಸವ ಇರುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಹಾಗಾದರೆ ಈಶ್ವರಪ್ಪನವರನ್ನು ಬಸವನಿಗೆ ಹೋಲಿಸುತ್ತಿದ್ದೀರಿ. ನಾನು ಏತಕ್ಕೆ ಈ ಮಾತು ಹೇಳಿದೆ ಎಂದರೆ, ನಮ್ಮ ಪಕ್ಷದಲ್ಲಿ ಆಂತರಿಕ ಪ್ರಜಾಪ್ರಭುತ್ವ ಇದೆ. ನಮ್ಮಲ್ಲಿ ಅದು ಪರಾಕಾಷ್ಠೆ ಮುಟ್ಟಿದೆ. ಇಲ್ಲಿ ಮುತ್ಸದ್ದಿಯಾಗಿರತಕ್ಕ ಒಬ್ಬ ಪ್ರಜಾಪ್ರಭುತ್ವವಾದಿಯನ್ನು ಹೇಳುವುದಕ್ಕೆ ಬಾಯಿ ಇಲ್ಲದ ಹಾಗೆ, ಶಕ್ತಿ ಇಲ್ಲದಹಾಗೆ ಬಿಸಾಡಿದಂಥ ಒಂದು ಪಕ್ಷದ ಇತಿಹಾಸ ಇರತಕ್ಕಂಥವರು ನೀವು. ನಿಮಗೆ ಬಿ.ಜೆ.ಪಿ ಪಕ್ಷ ಎಂಬ ಹೆಸರನ್ನು ತೆಗೆಯಬೇಕು. ಗರ್ಭಗುಡಿ ಪಕ್ಷ ಎಂದು ನಾಮಕರಣ ಮಾಡಿಕೊಳ್ಳಿ ಎಂದು ಹೇಳುವುದಕೊಸ್ಕರ ನಾನು ಹೇಳಿದೆ. ಅಟಲ್ ಬಿಹಾರಿ ವಾಜಪೇಯಿಯವರನ್ನು ಹೊಗಳಿದಾಗ, ಏನೋ ಶಿವರಾಮೇಗೌಡರು ಜಾಗ ಮಾಡುವುದಕ್ಕೆ ಎಂಬ ಭಾವನೆ ಅಲ್ಲ, ಈ ಪಕ್ಷದ ಪ್ರಜಾಪ್ರಭುತ್ವ ಎಷ್ಟರಮಟ್ಟಿಗೆ, ನಮ್ಮ ಪಕ್ಷದ ಪ್ರಜಾಪ್ರಭುತ್ವ ಎಷ್ಟರಮಟ್ಟಿಗೆ ಇದೆ, ಕಾಂಗ್ರೆಸ್ ಪಕ್ಷದ ಪ್ರಜಾಪ್ರಭುತ್ವ ಎಷ್ಟರಮಟ್ಟಿಗೆ ಇದೆ ಎಂಬುದು ಗೊತ್ತಾಗುತ್ತದೆ. ನಿಮ್ಮದು ಕವರ್ ಪಾಲಿಟಿಕ್ಸ್. ಯಾರನ್ನು ಬೇಕಾದರೂ ಅಲ್ಲಿಂದ ಕಳುಹಿಸುತ್ತಾರೆ, ನೀವು ಹೌದು ಎಂದು ಒಪ್ಪಿಕೊಳ್ಳಬೇಕು. ಅಲ್ಲಿ ಏನೂ ನಡೆಯುವುದಿಲ್ಲ. ಇವರ ಪಕ್ಷದ್ದು ಈ ರೀತಿ. ಆದರೆ, ನಮ್ಮ ಪಕ್ಷ ನೋಡಿ. ನಾವು ಏನು ಬೇಕಾದರೂ ಕಿತ್ತಾಡುತ್ತೇವೆ.

ಅಧ್ಯಕ್ಷರು :— ನಾನು ನಿಮ್ಮ ಶ್ರೇಯೋಭಿಲಾಷಿ, ನಾಳೆ ಸಂದರ್ಭ ಯಾವರೀತಿ ಬರುತ್ತದೋ ಗೊತ್ತಿಲ್ಲ. ನೀವು ಯಾರನ್ನೂ ಹೆಚ್ಚಿಗೆ ಅನ್ನುವುದಕ್ಕೆ ಹೋಗಬೇಡಿ. ನಿಮ್ಮ ಮಾತು ಮುಂದುವರಿಸಿ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಒಂದು ಮಾತು ಮಾತ್ರ ಸತ್ಯ. ನಾನು ಇದ್ದುದ್ದನ್ನು ಇದಹಾಗೆ ಹೇಳತಕ್ಕಂಥವನು, ಅದರಲ್ಲೇನೂ ಮುಚ್ಚುಮರೆ ಇಲ್ಲ. ಅದು ಏಕೆ ನೀವು ಅನುಮಾನ ವ್ಯಕ್ತ ಮಾಡುತ್ತೀರಿ?.

ಶ್ರೀ ವಾಟಾಳ್ ನಾಗರಾಜ್ :— ಮುಂದೆ ಯಾವ ಯಾವ ಘಳಿಗೆಯಲ್ಲಿ ಏನೇನು ಆಗುತ್ತದೆಯೋ ನೀವು ಸ್ವಲ್ಪ ತಾಳ್ಮೆಯಿಂದಿರಿ ಎಂದು ಅವರು ಹೇಳಿದರು.

ಅಧ್ಯಕ್ಷರು :— ಆ ಸಾಧನೆಯ ಬಗ್ಗೆ ಹೇಳಿಬಿಡಿ.

ಶ್ರೀ ವಾಟಾಳ್ ನಾಗರಾಜ್ :— ಮುಂದೆ ಭವಿಷ್ಯದಲ್ಲಿ ಏನೇನಾಗುತ್ತದೆಯೋ, ಅದರ ಬಗ್ಗೆ ಚಿಂತನೆ ಮಾಡಿ ಎಂದು ಅವರು ಹೇಳುತ್ತಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನನಗೆ ಚಿಂತನೆ ಇದೆ. ಪ್ರಜಾಪ್ರಭುತ್ವದ ಬಗ್ಗೆ ನಾನೇಕೆ ಹೇಳುತ್ತೇನೆಂದರೆ, ನಾವು ಕಿತ್ತಾಡುತ್ತೇವೆ, ಈ ಸರ್ಕಾರದಲ್ಲಿ ಸ್ಥಿರತೆ ಇಲ್ಲ, ಅಸ್ಥಿರತೆ ಇದೆ, ಮಂತ್ರಿಗಳಲ್ಲಿ ಒಟ್ಟಾಭಿಪ್ರಾಯ ಇಲ್ಲ. ಶಾಸಕರಲ್ಲಿ ಒಟ್ಟಾಭಿಪ್ರಾಯವಿಲ್ಲವೆಂದು ಹೇಳಿತ್ತಿರಲ್ಲಾ? ನಾವು ಹೊರಗಡೆ ಕಿತ್ತಾಡುತ್ತೇವೆ. ಆಂತರಿಕ ಪ್ರಜಾಪ್ರಭುತ್ವದ ನಮ್ಮಲ್ಲಿ ಪರಾಕಾಷ್ಠೆ ಮುಟ್ಟಿದೆ.

ಅಧ್ಯಕ್ಷರು :— ಗಂಡ ಹೆಂಡತಿ ಸಂಸಾರ ಎಲ್ಲಿ ಮಾಡುತ್ತಾರೆ. ಏನು ಬೀದಿಯಲ್ಲಿ ಮಾಡುತ್ತಾರೆಯೇ? ಪ್ರಜಾತಂತ್ರವೂ ಹಾಗೆಯೇ. ತಾವು ಮುಂದುವರೆಸಿ.....

ಶ್ರೀ ಎಲ್.ಆರ್. ಶಿವರಾಮೇಗೌಡ :— ನಾವು ಹೊರಗಡೆ ಕಿತ್ತಾಡಿದರೂ ಸಹಿತ ಆಂತರಿಕವಾಗಿ ಗಂಡ ಹೆಂಡತಿ ಇದ್ದಹಾಗೆಯೇ ಇರುತ್ತೇವೆ.

ಅಧ್ಯಕ್ಷರು :— ಬೀದಿಯಲ್ಲಿ ಮಾಡುವುದಲ್ಲ ಪ್ರಜಾತಂತ್ರ.....

ಶ್ರೀ ಎಲ್.ಆರ್. ಶಿವರಾಮೇಗೌಡ :— ಇವರದು ಗಂಡ ಹೆಂಡತಿಯರ ಜಗಳ ಅಲ್ಲ, ಇದು ಡೈವರ್ಸ್ ಕೇಸ್. ಇವರಲ್ಲಿ ಪುನ ಒಂದಾಗುವ ಪ್ರಶ್ನೆಯೇ ಇಲ್ಲ. ನಾವು ರಾಜಕೀಯ ಒತ್ತಾಸೆಯನ್ನೂ ಅರ್ಥ ಮಾಡಿಕೊಳ್ಳಬೇಕು. ಇವತ್ತು ಕೇಂದ್ರದಲ್ಲಿ ಬಿ.ಜೆ.ಪಿ ಸರ್ಕಾರ ಇದೆ. ಅಲ್ಲಿ ಮಡಿವಂತರ ಮತ್ತು ಶೂದ್ರರ ಹೋರಾಟ ನಡೆಯುತ್ತಾ ಇದೆ. ಈ ಗರ್ಭದ ಗುಡಿಯಲ್ಲಿ ಪ್ರಜಾಪ್ರಭುತ್ವದ ವಿಚಾರ ಮಾತನಾಡಲಿಕ್ಕೆ ಹೋದರೆ, ನೀನು ಆಚೆಗೆ ಹೋಗು ಎಂದು ನೋಟೀಸ್ ಕೂಡ ಕೊಡದೇ ಆಚೆಗೆ ಹಾಕತಕ್ಕಂಥ ಸಂಸ್ಕೃತಿ ಇದೆ. ಕಾಂಗ್ರೆಸ್‌ನವರದ್ದು ಒಂದು ತರಹ ಸಂಸ್ಕೃತಿ, ಇವರದ್ದು ಒಂದು ತರಹ ಸಂಸ್ಕೃತಿ. ನಮ್ಮದೊಂದು ತರಹ ಸಂಸ್ಕೃತಿ. ಈ ಎಲ್ಲಾ ಒತ್ತಡಗಳ ಮಧ್ಯೆ, ಎಷ್ಟರಮಟ್ಟಿಗೆ ಅಭಿವೃದ್ಧಿ ಮಾಡಿದ್ದೇವೆ ಎಂಬುದನ್ನು ನೋಡಿ.

ಅಧ್ಯಕ್ಷರು :— ಈ ಎಲ್ಲಾ ಒತ್ತಡಗಳ ಮಧ್ಯೆ ಹೊರಗಿದ್ದಾರಲ್ಲ ಅವರ ಗತಿ ಏನು? ಈ ಸದನದ ಹೊರಗಿರತಕ್ಕ ಜನರ ಗತಿ ಏನು?

ಶ್ರೀ ಎಲ್.ಆರ್ ಶಿವರಾಮೇಗೌಡ :— ಅವರಿಗೂ ಈಗ ಗೊತ್ತಾಗಿದೆ. ನೀರಾವರಿಗೆ ಎಷ್ಟು ಮಾಡಿದ್ದಾರೆ. ವ್ಯವಸಾಯ ಇಲಾಖೆಯಲ್ಲಿ ಏನು ಮಾಡಿದ್ದಾರೆಂದು ಗೊತ್ತಾಗಿದೆ. ಗೋವಿದೇಗೌಡರು ಎಷ್ಟು ಜನ ಶಿಕ್ಷಕರನ್ನು ತೆಗೆದುಕೊಂಡಿದ್ದಾರೆ. ಹಳ್ಳಿ ಜನ ದಡ್ಡರೇನು?

ಹಳ್ಳಿ ಜನ ಬುದ್ಧಿವಂತರಲ್ಲವೇ? ನಾವು ಎಂಎಲ್ಎ ಆದಾಗ. ಯಾವ ಊರಿಗೆ ಹೋದರೂ ಶಿಕ್ಷಕರನ್ನು ಕೊಡಿ ಎಂದು ಹೇಳುತ್ತಿದ್ದರು. ಸ್ವಾತಂತ್ರ್ಯ ಬಂದಾಗಿನಿಂದ ಒಂದು ಲಕ್ಷ ಶಿಕ್ಷಕರನ್ನು ತೆಗೆದುಕೊಂಡಿದ್ದರೆ, ಈ ಸರ್ಕಾರ ಬಂದ ಮೇಲೆ ಒಂದು ಲಕ್ಷ ಶಿಕ್ಷಕರನ್ನು ನೇಮಕಾತಿ ಮಾಡಿದೆ. ಕಾಗೋಡು ತಿಮ್ಮಪ್ಪನವರು ಈ ಮಾತನ್ನು ಒಪ್ಪುವುದಿಲ್ಲವೇ? ಇದೇನಾದರೂ ಸುಳ್ಳಾಗಿದ್ದರೆ ಹೇಳಿ. ಈ ಸರ್ಕಾರ ಅಸ್ತಿತ್ವಕ್ಕೆ ಬಂದಮೇಲೆ ಒಂದು ಲಕ್ಷ ಶಿಕ್ಷಕರನ್ನು ನೇಮಕಮಾಡಿದೆ. ಸ್ವಾತಂತ್ರ್ಯ ಬಂದು 52 ವರ್ಷಗಳಲ್ಲಿ, ಸುಮಾರು 46 ವರ್ಷಗಳಲ್ಲಿ ಮಾಡದೇ ಇದ್ದುದ್ದನ್ನು ಈ ಸರ್ಕಾರ ಮಾಡಿದೆ. ಇದನ್ನು ಹೇಳಿದರೆ ತಾವು ನಗುತ್ತೀರಿ. ಬ್ಲಾಕ್ ಬೋರ್ಡ್ ಆಪರೇಷನ್ ನಾವೇ ಮಾಡಿದ್ದು ಎಂದು ಹೇಳುತ್ತೀರಿ. ಈ ರೀತಿ ಮೊಂಡುವಾದ ಮಾಡಲಿಕ್ಕೆ ಏನೂ ಅಡ್ಡಿ ಇಲ್ಲ.

ಶ್ರೀ ವಾಟಾಳ್ ನಾಗರಾಜ್ :— ಮುಖ್ಯಮಂತ್ರಿಗಳು ನಿಮ್ಮದನ್ನು ಶವದ ಮನೆ ಎಂದು ಹೇಳಿದ್ದಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಅದು ಅವರು ಹೇಳಿರುವುದಲ್ಲ ಪತ್ರಿಕೆಯವರು ಬರೆದುಕೊಂಡಿರುವುದು.

ಶ್ರೀ ವಾಟಾಳ್ ನಾಗರಾಜ್ :— ಮುಖ್ಯಮಂತ್ರಿಗಳು ಆ ರೀತಿ ಹೇಳಿರುವುದು ತಪ್ಪೇ. ಬಹಳ ದೊಡ್ಡದಾಗಿ ಜನತಾ ದಳ ಶವದ ಮನೆ ಎಂದು ಬಂದಿದೆ.

ಶ್ರೀ ಕೆ.ಎಸ್. ನಾಗೇಗೌಡ :— ಅದು ತಪ್ಪು. ನಾವು ಅಂತಹ ಪತ್ರಿಕೆಗಳ ಮೇಲೆ ಎಚ್ಚರಿಕೆಯಿಂದ ಇರಬೇಕಾಗುತ್ತದೆ. ಅದನ್ನು ನೋಡಿ ನನಗೂ ಬಹಳ ಬೇಸರವಾಯಿತು. ಆ ಪದವನ್ನು ಮುಖ್ಯಮಂತ್ರಿಗಳು ಪಕ್ಷದ ವೇದಿಕೆಯಲ್ಲಿ ಬಳಸಿಲ್ಲ. ಇಲ್ಲಿ ಬಹಳ ಜನ ಕುಳಿತಿದ್ದಾರೆ. ಅದನ್ನು ಬಳಸುವಂಥ ಅವಶ್ಯಕತೆ ಏನಿದೆ? ಅವರು ಏನು ಹೇಳಿದು ಎಂದರೆ, ಕೆಲವು ಪತ್ರಿಕೆಗಳು ನಮ್ಮ ಪಕ್ಷವನ್ನು, ನಮ್ಮ ಸರ್ಕಾರವನ್ನು ತಿರುಚಿ, ತಿರುಚಿ ಬರೆದು ನಾವು ಹೇಳದೇ ಇದ್ದರೂ ಕೂಡ ಬರೆದು ಪ್ರಕಟ ಮಾಡುತ್ತಿದ್ದಾರೆ ಎಂದು ಹೇಳಿದ್ದಾರೆ. ನಾನು ಬೆಳಿಗ್ಗೆ ಆ ಪತ್ರಿಕೆಯನ್ನು ನೋಡಿದೆ. ಆ ಪತ್ರಿಕೆ ಯಾರ ಕೈಯಲ್ಲಿದೆ ಎಂದು ನಮಗೆ ಗೊತ್ತು. 'ಈ ಸಂಜೆ' ಪತ್ರಿಕೆ ಯಾರ ಕೈಲಿದೆ ಎಂಬುದು ಗೊತ್ತು. ಇಂತಹ ಸುಳ್ಳು ಸುದ್ದಿಗಳನ್ನು ಸೃಷ್ಟಿ ಮಾಡುವುದಕ್ಕೆ ಕೆಲವು ಪತ್ರಿಕೆಗಳು ಹುಟ್ಟಿಕೊಂಡಿವೆ. ಜನತಾದಳ ಶವದ ಮನೆ ಎಂದು ಹೇಳಿದರೆ ಹೇಗೆ? ಪತ್ರಿಕಾ ಸ್ವಾತಂತ್ರ್ಯಕ್ಕೆ ಅರ್ಥ ಇದೆ. ಇದನ್ನು ನೋಡಿ ನಾವು ನೊಂದಿದ್ದೇವೆ, ಇಂತಹ ಪತ್ರಿಕೆಗಳ ಮೇಲೆ ಜನ ತೀರ್ಮಾನ ಮಾಡುತ್ತಾರೆ. ನಮಗೆ ಆ ಪತ್ರಿಕೆಗಳನ್ನು ನೋಡಿ ಬಹಳ ನೋವಾಗಿದೆ. ಆ ಪತ್ರಿಕೆಗಳಿಗೆ ಜನ ಛೀಮಾರಿ ಹಾಕುತ್ತಾರೆ.

ಅಧ್ಯಕ್ಷರು :— ಪತ್ರಿಕೆಯವರ ಜೊತೆ ನಿಕಟವಾಗಿ ಸಂಪರ್ಕ ಇರುವವರು ನೀವೇ 5-6 ಜನ. ನಿಮಗೇ ಹೀಗನ್ನಿಸಿದರೆ ನಾವೇನು ಹೇಳೋಣ.

ಶ್ರೀ ಕೆ.ಎನ್. ನಾಗೇಗೌಡ :— ಕೆಲವೆ ಜನಕ್ಕೆ ಪತ್ರಿಕೆಯವರು ಗೊತ್ತಿರುವುದು ಎಂದು ಅವರು ಹೇಳಿದರು. ಅಂದರೆ, ರಮೇಶ್ ಕುಮಾರ್ ಅವರಿಗೆ, ಬಿ.ಎಲ್. ಶಂಕರ್ ಅವರಿಗೆ ಮತ್ತು ನನಗೆ ಎಂದು ಹೇಳಿದರು. ಅದನ್ನು ನಾನು ಒಪ್ಪಿಕೊಂಡಿದ್ದೇನೆ. ಆ ಪತ್ರಿಕೆ ಯಾರದ್ದು ಎಂಬುದು ನನಗೆ ಗೊತ್ತು. ಆ ಪತ್ರಿಕೆ ಹಿನ್ನಲೆ ಏನು ಎಂದು ಗೊತ್ತಿದೆ ಎಂದು ಹೇಳಿದ್ದೇನೆ.

ಅಧ್ಯಕ್ಷರು :— ನಾನೇನೂ ಅವರ ಜತೆ ಸಂಪರ್ಕ ಇಟ್ಟುಕೊಂಡಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಸನ್ಮಾನ್ಯ ಸಭಾಧ್ಯಕ್ಷರು ಒಂದು ಮಾತನ್ನು ಬಹಳ ಚೆನ್ನಾಗಿ ಹೇಳಿದಿರಿ. ಇಲ್ಲಿಯವವರು ಹೇಗೋ ಆಯಿತು, ಹೊರಗಡೆಯವರದಿದು ಹೇಗೆ? ಎಂದು. ಈ ಜನತಾದಳ ಸರ್ಕಾರದವರು ಕಿತ್ತಾಡುತ್ತಿರುವುದಕ್ಕೆ ಕೆಟ್ಟ ಹೆಸರು ಬಂದಿರುವುದು. ನಾನು ಒಂದು ಮಾತನ್ನು ಇವತ್ತು ಹೇಳುತ್ತೇನೆ. ದೇವೇಗೌಡರು, ಪಟೇಲರು, ಬೊಮ್ಮಾಯಿಯವರು, ಸಿದ್ದರಾಮಣ್ಣ, ಭೈರೇಗೌಡರು ಎಲ್ಲರೂ ಸಹಿತ ಒಂದಾಗಿ ಇವತ್ತು ಸಹಿತ ರಣರಂಗಕ್ಕೆ ಹೊರಡಲಿ. ಕಾಂಗ್ರೆಸ್‌ನವರದ್ದು 60ರ ಮೇಲೆ ಹೋಗುವುದಿಲ್ಲ. ರಾಮಕೃಷ್ಣ ಹೆಗಡೆಯವರನ್ನು ಸೇರಿಸಿಕೊಂಡು. ಇವತ್ತು ಜನಕ್ಕೆ ಇಷ್ಟು ಜನರ ಫೋಟೋ ಹಾಕಿಕೊಂಡು ಚುನಾವಣೆಯಲ್ಲಿ ಹೋಗಿ ನಾವು ಇನ್ನು ಮೇಲೆ ಕಿತ್ತಾಡುವುದಿಲ್ಲ. ಹೋದಸಾರಿಯೇ ನಾವು ಇನ್ನು ಮೇಲೆ ಕಿತ್ತಾಡುವುದಿಲ್ಲವೆಂದು ಎಲ್ಲಾ ದೇವರ ಮೇಲೆ ಪ್ರಮಾಣ ಮಾಡಿ ಹೇಳಿದ್ದೆವು. ಆದರೂ ಕಿತ್ತಾಡಿದ್ದೇವೆ, ಇನ್ನು ಮನ್ನಿಸಿ ನಾವು ಕಿತ್ತಾಡುವುದಿಲ್ಲ, ನಾವೆಲ್ಲಾ ಒಂದಾಗಿರುತ್ತೇವೆಂದು ಹೇಳಿದರೆ, ಇವತ್ತೂ 150 ಸೀಟುಗಳಿಗೆ ಮೋಸ ಇಲ್ಲವೆಂಬುದನ್ನು, ಇದರ ಸಾಧನೆಗಳಿಂದ ಹೇಳಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :— ಸವಕಲು ನಾಣ್ಯವನ್ನು ಎಷ್ಟು ಜನ ಹಿಡಿದುಕೊಂಡು ಹೋದರೂ, ಅದು ಸವಕಲು ನಾಣ್ಯ ಎಂದು ಜನಕ್ಕೆ ಗೊತ್ತಾಗಿಬಿಡುತ್ತದೆ.

ಅಧ್ಯಕ್ಷರು :— ಸ್ಟೇಜ್ ಬಹಳ ದೊಡ್ಡದು ಹಾಕಬೇಕಾಗುತ್ತದೆ. ಇಷ್ಟು ಜನ ಲೈನಾಗಿ ಕೈ ಹಿಡಿದುಕೊಂಡು ನಿಂತುಕೊಳ್ಳಬೇಕಲ್ಲಾ. ಆಗ 4-5 ಜನ ನಿಂತುಕೊಳ್ಳುವುದಕ್ಕೆ ಆಗ ಬಹಳ ದೊಡ್ಡದನ್ನು ಹಾಕಿದ್ದಿರಿ. ಈಗ ಇಷ್ಟು ಜನ ನಿಂತುಕೊಳ್ಳಬೇಕಾದರೆ ಭಾರಿ ದೊಡ್ಡ ಸ್ಟೇಜ್ ಹಾಕಬೇಕಾಗುತ್ತದೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ಸಭಾಧ್ಯಕ್ಷರೇ, ನಾಳಿಗೆ ಮುಂದುವರಿಸುತ್ತೇನೆ.

ಅಧ್ಯಕ್ಷರು :— ಶಿವರಾಮೇಗೌಡರು ತಮ್ಮ ಭಾಷಣವನ್ನು ಇವತ್ತೇ ಮುಗಿಸಿಬಿಡಿ. ಇವತ್ತು ನೀವು ಮುಗಿಸಿದ ಮೇಲೆ ಬಾಕಿ ಇರುವ ಜೀರೋ ಅವರ್ಸ್ ಮತ್ತು ಕಾಲಿಂಗ್ ಅಟೆನ್ಷ್ ತೆಗೆದುಕೊಳ್ಳಬೇಕು. ಅನಂತರ ಮಾನ್ಯ ಸಭಾಪತಿಯವರು ಮತ್ತಿ ಶ್ರೀಮತಿ ಲಲಿತಾನಾಯಕ್‌ರವರು ಮಾತನಾಡಲು ಅವಕಾಶವನ್ನು ಕೊಡಬೇಕು. ಇವೊತ್ತು ಬೇಗನೆ ಮುಗಿಸಲು ಆಗುವುದಿಲ್ಲ ಎಂದು ನಾನು ಬೆಳಿಗ್ಗೆ ಹೇಳಿದ್ದೇನೆ ಯಾಕೆಂದರೆ ಎರಡು ಪ್ರಮುಖ ವಿರೋಧ ಪಕ್ಷಗಳು ಎರಡು ದಿವಸ ಬಹಳ . ಪ್ರಮುಖವಾದ ವಿಚಾರಗಳನ್ನು ಚರ್ಚೆಗೆ ತಂದರು. ನಾನು ಅವರ ಜೊತೆಗೆ ಸಹಕರಿಸಲೇ ಬೇಕಾಗಿತ್ತು. ಸ್ವಲ್ಪ ಸಮಯವನ್ನು ಅದಕ್ಕಾಗಿ ವಿನಿಯೋಗ ಮಾಡಿದ್ದೇವೆ. ಹಾಗಾಗಿ ನಾವುಗಳು ಸ್ವಲ್ಪ ಹೆಚ್ಚು ಹೊತ್ತು ಇಲ್ಲಿ ಕುಳಿತು ಕೆಲಸಗಳನ್ನು ಮಾಡಬೇಕಾಗುತ್ತದೆ. ಇಲ್ಲವಾದರೆ ನಾವು ಸಮಯವನ್ನು ಹೇಗೆ ಅಡ್‌ಜಸ್ಟ್ ಮಾಡಿಕೊಳ್ಳುವುದು ಎಂದು ಮಾನ್ಯ ಸದಸ್ಯರುಗಳೇ ಹೇಳಬೇಕು. ತಾವುಗಳು ಮುಂದುವರಿಸಿ...

ಶ್ರೀ ಎಲ್.ಆರ್. ಶಿವರಾಮೇಗೌಡ :— ಮಾನ್ಯ ಅಧ್ಯಕ್ಷರೇ ನಾನು ಈಗ ಪ್ರಸ್ತಾಪಿಸಿರುವುದು ನಾಲ್ಕು ಇಲಾಖೆಗಳು ಮಾತ್ರ. ವಸತಿ, ನೀರಾವರಿ, ವ್ಯವಸಾಯ ಮತ್ತು ಶಿಕ್ಷಣ ಇಲಾಖೆಯ ಕುರಿತು ಮಾತನಾಡಿದ್ದು ಇನ್ನೂ 39 ಇಲಾಖೆಗಳು ಬಾಕಿ ಇವೆ. ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯದ ಮೇಲೆ ಚೆನ್ನಾಗಿ ಮಾತನಾಡಬೇಕೆಂದು ತಾವುಗಳು ಹೇಳಿದ್ದೀರಿ. ನನಗೆ ದಯಮಾಡಿ ಅವಕಾಶವನ್ನು ನಾಳೇ ಮಾಡಿಕೊಡಿ. ಇವೊತ್ತು ಸ್ವಲ್ಪ ಕಷ್ಟಸಾಧ್ಯವಾಗಿದೆ. ನನ್ನ ಮೇಲೆ ಸಿಟ್ಟುಮಾಡಿಕೊಳ್ಳಬೇಡಿ.

ಅಧ್ಯಕ್ಷರು :— ಇಲ್ಲ ತಾವುಗಳು ಇವೊತ್ತೇ ಮುಗಿಸಬೇಕು. ನನಗೆ ಸಮಯಾಭಾವದ ಒತ್ತಡ ಇದೆ. ನಿನ್ನೆ ಇವೊತ್ತು ಪ್ರಮುಖವಾದ ವಿಚಾರಗಳನ್ನು ಮುಗಿಸಿದ್ದೇನೆ. ನಾಳೆ ಅರ್ಧ ದಿನ. ಶನಿವಾರ ಮತ್ತು ಭಾನುವಾರ ರಜಾದಿನಗಳು 16ನೇ ತಾರೀಖಿನೊಳಗಾಗಿ ನಾವು ಎಲ್ಲವನ್ನೂ ಮುಗಿಸಬೇಕಾಗಿದೆ. ವಿರೋಧ ಪಕ್ಷದವರಿಗೆ ಅವಕಾಶವನ್ನು ಒದಗಿಸಿಕೊಡಬೇಕು. ಅವರು ಎಷ್ಟು ಸಮಯ ತೆಗೆದುಕೊಳ್ಳುತ್ತಾರೆಂದು ಗೊತ್ತಾಗುವುದಿಲ್ಲ. ಇರುವ ಸಮಯದಲ್ಲಿ ಹೇಗೆ ಮಾತನಾಡಬೇಕೆಂದು ಸ್ವತಂತ್ರ್ಯವಾಗಿ ಚುನಾವಣೆಯಲ್ಲಿ ಆರಿಸಿ ಬಂದ ತಮಗೆ ಗೊತ್ತಿಲ್ಲವೆ? ಕ್ಷೇತ್ರದಲ್ಲಿ ಕೆಲಸಮಾಡಿ ಗೆಲ್ಲುವವರನ್ನು ಪ್ರೋತ್ಸಾಹಿಸಬೇಕು. ಮಾನ್ಯ ಸಂಸದೀಯ ವ್ಯವಹಾರಗಳ ಸಚಿವರ ನಿರ್ಬಂಧವಿದೆ. ಬೇಗ ಮುಗಿಸಲು ಹೇಳುತ್ತಾರೆ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನನಗೆ ಐದು ಗಂಟೆಗಳ ಕಾಲ ಮಾತನಾಡಬೇಕೆಂದು ಅವರೇ ಹೇಳಿದ್ದಾರೆ.

ಅಧ್ಯಕ್ಷರು :— ಸಂಸದೀಯ ವ್ಯವಹಾರಗಳ ಸಚಿವರೇ, ಶಿವರಾಮೇಗೌಡರು ಐದು ಗಂಟೆಗಳ ಕಾಲ ಮಾತನಾಡಲಿ ಎಂದು ಹೇಳಿದ್ದೀರೋ?

ಶ್ರೀ ಎಂ.ಸಿ. ನಾಣಯ್ಯ :— ಕೇಳುವವರು ಇದ್ದರೆ ಐದಲ್ಲ ಆರು ಗಂಟೆಗಳ ಕಾಲವೂ ಮಾತನಾಡಲಿ.

ಅಧ್ಯಕ್ಷರು :— ಪ್ರಜಾತಂತ್ರ, ನೀವು ಹೇಳಿದ್ದನ್ನು ಅವರು ಒಪ್ಪಲಿಲ್ಲ.

ಶ್ರೀ ಎಲ್.ಆರ್. ಶಿವರಾಮೇಗೌಡ :— ನಿನ್ನೆ ನಾನು ಬೆಳಿಗ್ಗೆ ಇಂದ ಸಾಯಂಕಾಲದವರೆಗೂ ಕಾಯುತ್ತಾ ಕುಳಿತಿದ್ದೆ. ಇವೊತ್ತು ಕೂಡ ಕಾಯುತ್ತಾ ಕುಳಿತಿದ್ದೇನೆ. ನನಗೆ ದಯವಿಟ್ಟು ಅವಕಾಶವನ್ನು ನಾಳೆಗೆ ಮಾಡಿಕೊಡಿ

ಅಧ್ಯಕ್ಷರು :— ನನ್ನ ಪರಿಸ್ಥಿತಿಯನ್ನು ಅರ್ಥ ಮಾಡಿಕೊಳ್ಳಿ. ನಾಳೆ ನಾನ್-ಅಫಿಶಿಯಲ್ ಡೇ. ಶನಿವಾರ ಮತ್ತು ಭಾನುವಾರ ರಜಾದಿನಗಳು. ಇನ್ನೂ ಪ್ರಪೋಸರ್ ಮಾತನಾಡುತ್ತಾ ಇದ್ದಾರೆ. ಇನ್ನೂ ಅನುಮೋದನೆ ಮಾಡುವವರು ಮಾತನಾಡಬೇಕಾಗಿದೆ. ಎರಡು ಪ್ರಮುಖ ವಿರೋಧ ಪಕ್ಷಗಳು ಮಾತನಾಡಬೇಕು. ಅವರಲ್ಲಿ ಎರಡು ಕಡೆಗಳಿಗೆ ಅವಕಾಶ ಮಾಡಿಕೊಡಬೇಕು. ಒಬ್ಬರು ಅಧಿಕೃತ, ಇನ್ನೊಬ್ಬರು ಅನಧಿಕೃತ ಎಂದರೂ ಕೂಡ ನಂಬರ್ ಪ್ರಕಾರ ಹೆಚ್ಚು ಕಡಿಮೆ ಒಂದೇ ಇರುತ್ತದೆ. ನಾನು ಆ ಎರಡು ಪ್ರಮುಖ ವಿರೋಧಪಕ್ಷಗಳಿಗೂ ನ್ಯಾಯ ಒದಗಿಸಿಕೊಡಬೇಕಾಗುತ್ತದೆ. ಹೀಗಾಗಿ ಚರ್ಚೆಗೆ ಅವಕಾಶ ಕೊಡುವುದು ಮತ್ತು ಉತ್ತರಕ್ಕೆ ಸಮಯ ಒದಗಿಸಿಕೊಡುವುದು ನನಗೆ ಸ್ವಲ್ಪ ಕಷ್ಟವಾಗುತ್ತದೆ. ಆದ್ದರಿಂದ ತಾವುಗಳು ತಮ್ಮ ಮಾತನ್ನು ಮುಗಿಸಿ ಸಹಕರಿಸಿ.

ಶ್ರೀ ಎಂ.ಸಿ. ನಾಣಯ್ಯ :— ಮಾನ್ಯ ಅಧ್ಯಕ್ಷರೇ, ತಾವುಗಳು ವಿರೋಧ ಪಕ್ಷಗಳಿಗೆ ಮತ್ತು ನಮಗೆ ಇಷ್ಟು ಸಮಯಾವಕಾಶ ಎಂದು ನಿಗದಿಪಡಿಸಿ ಆದೇಶ ಕೊಡಿ. ನಾವು ಆ ಸಮಯದೊಳಗೆ ನಮ್ಮ ಮಾತುಗಳನ್ನು ಮುಗಿಸಲು ಬದ್ಧರಾಗಿರುತ್ತೇವೆ. ಶಿವರಾಮೇಗೌಡರು ತಮ್ಮ ಮಾತುಗಳನ್ನು ಇವೊತ್ತೇ ಪ್ರಸ್ತಾಪಿಸಿ ಮುಗಿಸಿದರೆ ಒಳ್ಳೆಯದು. ಅದು ಅವರಿಗೇ ಬಿಟ್ಟ ವಿಚಾರ.

ಅಧ್ಯಕ್ಷರು :— ತಾವು ಮಾತನಾಡಿ. ತಮ್ಮ ಮಾತಿಗೆ ನಾವು ಯಾರೂ ಕಡಿವಾಣ ಹಾಕುವುದಿಲ್ಲ. ಅವರ ವಿಚಾರಧಾರೆಗೆ ನಾನು ಅಡ್ಡಬರುವುದಿಲ್ಲ. ಇವೊತ್ತು ಸ್ವಲ್ಪ ಹೊತ್ತು ಹೆಚ್ಚುಕಾಲ ಕುಳಿತು ಕೆಲಸ ಮಾಡೋಣ. ನಿನ್ನೆ ಯಾರು ಮೆಂಬರ್ಸ್ ಜೀರೋ ಅವರ್ಸ್‌ಗೆ ಕೊಟ್ಟಿದ್ದರು, ಅದನ್ನು ನಿನ್ನೆ ಪ್ರಸ್ತಾಪ ಮಾಡಿಲ್ಲ. ಇವೊತ್ತಾದರೂ ಮಾಡಲೇಬೇಕಾಗುತ್ತದೆ. ಗಮನಸೆಳೆಯುವ ಸೂಚನೆಗಳು ಎರಡು ಇವೆ. ಶ್ರೀ ಡಿ.ಆರ್. ಪಾಟೀಲರವರು ಕುಡಿಯುವ ನೀರಿನ ವಿಚಾರದ ಬಗ್ಗೆ ಪ್ರಮುಖವಾಗಿ ಕೊಟ್ಟಿದ್ದಾರೆ.

ಶ್ರೀ ಯು.ಆರ್. ಸಭಾಪತಿ :— ನಾವು ಸ್ವಲ್ಪ ಹೆಚ್ಚು ಹೊತ್ತು ಕುಳಿತು ಕೆಲಸ ಮಾಡೋಣ. ಲೋಕಸಭೆಯಲ್ಲಿ ರಾತ್ರಿ 12 ಗಂಟೆಗಳವರೆಗೆ ಕುಳಿತಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :— ಲೋಕಸಭೆಯಲ್ಲಿ ಪಲ್ಪಿ ಹೊಡೆಯುತ್ತಾರೆ ಎಂದು ನಾವು ಇಲ್ಲಿ ಹೊಡೆಯಲು ಬರುತ್ತದೆಯೇ? ನಾವು ಇಲ್ಲಿ ಕೆಲಸಕಾರ್ಯಗಳನ್ನು ಮಾಡುವ ಬಗ್ಗೆ ಒಂದು ಸಮಯ ನಿಗದಿ ಮಾಡಿಕೊಳ್ಳೋಣ.

ಅಧ್ಯಕ್ಷರು :— ತಾವುಗಳು ನನ್ನ ಕಷ್ಟವನ್ನು ಅರ್ಥ ಮಾಡಿಕೊಳ್ಳಬೇಕು. 17ನೇ ತಾರೀಖಿಗೆ ಬಜೆಟ್ ಮಂಡನೆ ಇದೆ. 16ನೇ ತಾರೀಖಿನಂದು ರಾಜ್ಯಪಾಲರ ಭಾಷಣಕ್ಕೆ ನಾವು ವಂದನಾರ್ಪಣಾ ನಿರ್ಣಯದ ಮೇಲೆ ಮಾತುಗಳನ್ನು ಮುಗಿಸಿ ಅದಕ್ಕೆ ಉತ್ತರಕೊಡಿಸಬೇಕು. ಅದನ್ನು ಪಾಸ್ ಮಾಡಿಕೊಳ್ಳಬೇಕಾಗಿದೆ. ನಮಗೆ ಉಳಿದಿರತಕ್ಕಂಥಾದ್ದು ಸೋಮವಾರ ಮತ್ತು ಮಂಗಳವಾರ ಮಾತ್ರ. ಈ ಎರಡು ದಿನಗಳಲ್ಲಿ ನಾನು ಎಷ್ಟು ಜನರಿಗೆ ಅಡ್‌ಜಸ್ಟ್ ಮಾಡಲಿ? ಒಬ್ಬ ಪ್ರಮುಖ ವಿರೋಧ ಪಕ್ಷದವರು ಮಾತನಾಡಿದರೆ ನಾಳೆ ನಾವು ಮಾತನಾಡುತ್ತೇವೆ ಎಂದು ಇನ್ನೊಬ್ಬರು ಹೇಳುತ್ತಾರೆ. ಹಾಗೆ ಮೆಲೇಜ್ ತೆಗೆದುಕೊಳ್ಳುವುದರಲ್ಲಿ ತಪ್ಪೇನಿಲ್ಲ. ನಾವು ಎಲ್ಲವನ್ನೂ ಸರಿದೂಗಿಸಿಕೊಂಡು ಮತ್ತು ಅಡ್ ಜಸ್ಟ್ ಮಾಡಿಕೊಂಡು ಹೋಗಬೇಕು. ತಾವುಗಳೂ ನನ್ನ ಜೊತೆಗೆ ಸಹಕರಿಸಬೇಕು. ಇವೊತ್ತು ಅವರು ಮಾತನಾಡಿ ಮುಗಿಸಲಿ. ನಾಳೆ 9ಗಂಟೆಗೆ ಪ್ರಾರಂಭ ಮಾಡೋಣ. ನಾಳೆ ಪ್ರಮುಖ ವಿರೋಧ ಪಕ್ಷಗಳು ಅಡ್ ಜರ್ನ್ ಮೆಂಟ್ ಮೋಷನ್ ತರುವುದಿಲ್ಲ ಎಂದು ಮಾತುಕೊಡಬೇಕು. ಈಗಾಗಲೇ ನಾಳೆಗೆ 10 ಗಂಟೆಗೆ ಸಭೆ ಸೇರುತ್ತದೆ ಎಂದು ಸೂಚನೆ ಹೋಗಿದೆ. ನಾವು ಪತ್ರಿಕೆಯವರಿಗೂ ಹೇಳಿ 9-00 ಗಂಟೆಗೆ ಸಭೆ ಸೇರುತ್ತದೆ ಎಂದು ಅನೌನ್ಸ್ ಮಾಡಿಸುತ್ತೇವೆ. ಈಗ ಒಂದು ಗಂಟೆಗೆ ಕಾಲ ಕುಳಿತುಕೊಳ್ಳಿ. ಕಾಲಿಂಗ್ ಅಟೆನ್‌ಶನ್ ಮತ್ತು ಜೀರೋ ಅವರ್ಸ್ ಮುಗಿಸೋಣ.

7.10 ಪಿ.ಎಂ.

(7) ಗಮನಸೆಳೆಯುವ ಸೂಚನೆಗಳು

(1) ಗದಗ-ಬೆಟಗೇರಿಯಲ್ಲಿ ವಿದ್ಯುತ್ ವೋಲ್ಟೇಜ್ ಸರಿಯಿಲ್ಲದ ಕಾರಣದಿಂದ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್) :— ಮಾನ್ಯ ಅಧ್ಯಕ್ಷರೇ, ಗದಗ-ಬೆಟಗೇರಿ ನಗರಕ್ಕೆ ವಿದ್ಯುತ್ ವೋಲ್ಟೇಜ್ ಸರಿಯಾಗಿ ಇಲ್ಲದ ಕಾರಣ ಕುಡಿಯುವ ನೀರಿಗೆ ಪಂಪುಗಳಿಂದ ನೀರು ಎತ್ತುವಲ್ಲಿ ಆಗುತ್ತಿರುವ ತೊಂದರೆಯ ಬಗ್ಗೆ ಇಂಧನ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.